2015 ಕ.ತೀ.ವ 465

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮೋಹನ್ ಎಂ. ಶಾಂತನಗೌಡರ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಸಿ.ಆರ್. ಕುಮಾರಸ್ವಾಮಿ

### ಹೆಬ್ಬಗೋಡಿ ಪೊಲೀಸ್ ಮೂಲಕ ಕರ್ನಾಟಕ ಸರ್ಕಾರ –ವಿರುದ್ಧ– ಆರ್.ಹೆಚ್. ಕೇಶವ ಮತ್ತು ಇತರರು*

ದಂಡ ಪ್ರಕ್ರಿಯಾ ಸಂಹಿತೆ ಕಲಂ 378(1) & (3)ರಡಿಯಲ್ಲಿ ಕ್ರಿಮಿನಲ್ ಮೇಲ್ಮನವಿ.

ಐ.ಪಿ.ಸಿ. ಸೆಕ್ಷನ್ 304–II, 302

ಎಲ್ಲಾ ಎದುರುದಾರರನ್ನು ಅವರ ವಿರುದ್ಧ ಹೊರಿಸಿದ್ದ ದೋಷಾರೋಪದಿಂದ ಮುಕ್ತಗೊಳಿಸಿ ಭಾರತ ದಂಡ ಸಂಹಿತೆ ಕಲಂ 302ರ ಜೊತೆಗೋದಿದಂತೆ ಕಲಂ 34ರ ಅಡಿಯಲ್ಲಿನ ಆರೋಪದಿಂದ ಮುಕ್ತಗೊಳಿಸಿದ ಅಧಿವಿಚಾರಣಾ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸರ್ಕಾರದಿಂದ ಸದರಿ ಕ್ರಿಮಿನಲ್ ಮೇಲ್ಮನವಿ.

ಕೃತ್ಯವಾದ ಸ್ಥಳದಿಂದ ಕೊಲೆಯಾದ ವ್ಯಕ್ತಿಗಳನ್ನು ಆಸ್ಪತ್ರೆಗೆ ಸೇರಿಸುವ ಮಧ್ಯೆ ಎರಡು ಆರಕ್ಷಕ ಠಾಣೆಗಳಿದ್ದರೂ ಫಿರ್ಯಾದನ್ನು ಸಲ್ಲಿಸದೆ ಬಹಳ ತಡವಾಗಿ ಸಲ್ಲಿಸಲಾಗಿದೆ. ಫಿರ್ಯಾದನ್ನು ಜಾಗರೂಕತೆಯಿಂದ ಓದಿದರೇ ಪ್ರಾಸಿಕ್ಯೂಷನ್ ಯಾವುದೇ ಸಾಕ್ಷಿಯು ಕೃತ್ಯಕ್ಕೆ ಪ್ರತ್ಯಕ್ಷ ಸಾಕ್ಷಿಯಲ್ಲವೆಂದು ಸ್ಪಷ್ಟವಾಗುತ್ತದೆ.

ಈ ಎಲ್ಲಾ ಕಾರಣದಿಂದ ಆರೋಪಿಗಳನ್ನು ಭಾರತ ದಂಡ ಸಂಹಿತೆ ಕಲಂ 302ರ ಜೊತೆಗೋದಿದಂತೆ ಕಲಂ 34ರ ಅಡಿಯಲ್ಲಿನ ಆರೋಪದಿಂದ ಮುಕ್ತಗೊಳಿಸಿದ ಅಧಿವಿಚಾರಣಾ ಆದೇಶದಲ್ಲಿ ಯಾವುದೇ ದೋಷವಿಲ್ಲ. ಹಾಗೆಯೇ ಎದುರುದಾರರು

*ಕ್ರಿಮಿನಲ್ ಅಪೀಲ್ ಸಂ. 358/2009, ದಿನಾಂಕ: 3ನೇ ಜೂನ್, 2014.

**ತೆಗೆದುಕೊಂಡ ಪ್ರತಿವಾದದ ಹಿನ್ನೆಲೆಯಲ್ಲಿ ಮೊದಲನೇ ಎದುರದಾರರ ಪ್ರಕರಣವು ಭಾರತ ದಂಡ ಸಂಹಿತೆ ಕಲಂ 304-I ರಡಿಯಲ್ಲಿ ಬರುತ್ತದೆ. ಮೊದಲನೇ ಎದುರುದಾರ/ ಆರೋಪಿಯ ಪ್ರಕರಣಕ್ಕೆ ಭಾರತ ದಂಡ ಸಂಹಿತೆಯ ಕಲಂ 300ರ I ಹಾಗೂ 4ರ ಆಕ್ಷೇಪಣೆ ಅನ್ವಯಿಸುತ್ತದೆ. ತತ್ಪರಿಣಾಮವಾಗಿ ಮೊದಲನೇ ಎದುರುದಾರರನ್ನು ಭಾರತ ದಂಡ ಸಂಹಿತೆ ಕಲಂ 304-I ರಡಿಯಲ್ಲಿ 8 ವರ್ಷಗಳಷ್ಟು ಸಜೆ ಹಾಗೂ 6 ಲಕ್ಷ ರೂ. ಜುಲ್ಮಾನೆ ವಿಧಿಸಿ ಸದರಿ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಲಾಗಿದೆ.**

ಮೇಲ್ಮನವಿದಾರರ ಪರ : ಶ್ರೀ ಬಿ.ಟಿ.ವೆಂಕಟೇಶ್ - ಎಸ್.ಪಿ.ಪಿ.-II,
ಎದುರುದಾರರ ಪರ : ಶ್ರೀ ಎಸ್.ಕೆ.ವೆಂಕಟ ರೆಡ್ಡಿ - ನ್ಯಾಯವಾದಿಗಳು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಮೋಹನ್ ಎಂ. ಶಾಂತನಗೌಡರ್:**

ಈ ಮೇಲ್ಮನವಿಯನ್ನು ಸರ್ಕಾರವು, ಬೆಂಗಳೂರಿನ ಬೆಂಗಳೂರು ಗ್ರಾಮೀಣ ಪ್ರಧಾನ ಸೆಷನ್ಸ್ ನ್ಯಾಯಾಲಯವು ಹೊರಡಿಸಿದ ದಿನಾಂಕ 20.01.2009ರ ತೀರ್ಪು ಮತ್ತು ಆದೇಶದ ವಿರುದ್ಧ ಹೂಡಿದೆ. ಸದರಿ ತೀರ್ಪಿನ ಮೂಲಕ ಅಧಿವಿಚಾರಣಾ ನ್ಯಾಯಾಲಯವು ಐ.ಪಿ.ಸಿ. 34ನೇ ಸೆಕ್ಷನ್‌ನೊಂದಿಗೆ ಓದಿಕೊಂಡಂತೆ 302ನೇ ಸೆಕ್ಷನ್ ಅಡಿಯಲ್ಲಿನ ಅಪರಾಧಗಳಿಗಾಗಿ 1, 2 ಮತ್ತು 3ನೇ ಆಪಾದಿತರನ್ನು ಖುಲಾಸೆಗೊಳಿಸಿದೆ. ಆದಾಗ್ಯೂ, 1ನೇ ಸಂಖ್ಯೆಯ ಆಪಾದಿತನಿಗೆ ಐ.ಪಿ.ಸಿ. 304-IIನೇ ಸೆಕ್ಷನ್ ಅಡಿಯಲ್ಲಿನ ಅಪರಾಧಗಳಿಗಾಗಿ ಅಪರಾಧ ನಿರ್ಣಯ ಮಾಡಿದ್ದು, ಆತನಿಗೆ ಐದು ವರ್ಷಗಳ ಕಾರಾವಾಸ ಶಿಕ್ಷೆ ಮತ್ತು 2,00,000/- ರೂ.ಗಳ ದಂಡವನ್ನು ವಿಧಿಸಿದೆ. 1ನೇ ಸಂಖ್ಯೆಯ ಆಪಾದಿತನು ಈಗಾಗಲೇ ಕಾರಾವಾಸ ಶಿಕ್ಷೆಯನ್ನು ಅನುಭವಿಸಿದ್ದು ಮತ್ತು ದಂಡವನ್ನು ಸಂದಾಯ ಮಾಡಿರುವುದರಿಂದ ಆತನನ್ನು ಬಂಧನದಿಂದ ಬಿಡುಗಡೆಗೊಳಿಸಲಾಗಿದೆ. ಅಪರಾಧ ನಿರ್ಣೀತನಾದ

1ನೇ ಸಂಖ್ಯೆಯ ಆಪಾದಿತನು ತನ್ನ ಅಪರಾಧ ನಿರ್ಣಯ ಮತ್ತು ಶಿಕ್ಷೆಯನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿಲ್ಲ.

2. ಪ್ರಾಸಿಕ್ಯೂಷನ್ ವಾದವು ಸಂಕ್ಷಿಪ್ತವಾಗಿ ಈ ಮುಂದಿನಂತಿದೆ: ಆಪಾದಿತನ ಕುಟುಂಬ ಮತ್ತು ಮೃತರ ಕುಟುಂಬದ ನಡುವೆ ಕೆಲವು ಕೃಷಿ ಭೂಮಿಯ ಸರಹದ್ದುಗಳಿಗೆ ಸಂಬಂಧಿಸಿದಂತೆ ಹಗೆತನ/ವಿವಾದವಿತ್ತು; ಆಪಾದಿತನು ಮೃತನ ಭೂಮಿಯಲ್ಲಿ 2 ಅಡಿ ವಿಸ್ತೀರ್ಣದ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದನೆಂದು ಆಪಾದಿಸಲಾಗಿದೆ. ಆ ಸಂಬಂಧ, ಎರಡೂ ಕುಟುಂಬಗಳ ನಡುವೆ ವೈಷಮ್ಯ ಬೆಳೆದಿತ್ತು. ಮೃತರಿಬ್ಬರೂ ಎಂದರೆ, ಗೋಪಾಲರೆಡ್ಡಿ ಮತ್ತು ಸೋಮಶೇಖರ ರೆಡ್ಡಿ ಪರಸ್ಪರ ಸಹೋದರರಾಗಿದ್ದಾರೆ. ಹಾಗೆಯೇ, ಪಿ.ಡಬ್ಲ್ಯೂ.–1, 2 ಮತ್ತು 3 ಕೂಡಾ ಮೃತರ ಸಹೋದರರೇ ಆಗಿದ್ದಾರೆ. 1ನೇ ಸಂಖ್ಯೆಯ ಆಪಾದಿತನು 2ನೇ ಸಂಖ್ಯೆಯ ಆಪಾದಿತನ ಮಗನಾಗಿದ್ದಾನೆ. 3ನೇ ಸಂಖ್ಯೆಯ ಆಪಾದಿತನು 2ನೇ ಸಂಖ್ಯೆಯ ಆಪಾದಿತನ ಸಹೋದರ ಹಾಗೂ 1ನೇ ಸಂಖ್ಯೆಯ ಆಪಾದಿತನ ಚಿಕ್ಕಪ್ಪನಾಗಿದ್ದಾನೆ.

ಘಟನೆ ನಡೆದ ದಿನಾಂಕದಂದು, ಎಂದರೆ, 25.05.2004ರಂದು ಬೆಳಗ್ಗೆ ಸುಮಾರು 7.30 ಗಂಟೆಗೆ ಮೃತ ಗೋಪಾಲರೆಡ್ಡಿ, ಮೃತ ಸೋಮಶೇಖರ ರೆಡ್ಡಿ, ಮುನಿರೆಡ್ಡಿ (ಪಿ.ಡಬ್ಲ್ಯೂ–3), ಬಲರಾಮ್ (ನ್ಯಾಯಾಲಯದ ಮುಂದೆ ಪರಿಶೀಲಿಸಿಲ್ಲ), ರವೀಂದ್ರಯ್ಯ (ಪಿ.ಡಬ್ಲ್ಯೂ–2) ಸಿಂಗೇನ ಅಗ್ರಹಾರದಲ್ಲಿರುವ ಇಟ್ಟಿಗೆ ಕಾರ್ಖಾನೆ ಸಮೀಪ ತಮ್ಮ ದೈನಂದಿನ ಕಾರ್ಯದಲ್ಲಿ ನಿರತರಾಗಿದ್ದರು; ಸ್ವಲ್ಪ ದೂರದಲ್ಲಿದ್ದ ಫಿರ್ಯಾದುದಾರನಿಗೆ ಮೃತರಿಬ್ಬರು ಕೂಗುವುದು, ಕಿರುಚುವುದು ಕೇಳಿಬಂತು. ಆ ಕೂಡಲೇ ಫಿರ್ಯಾದುದಾರನು ಸ್ಥಳಕ್ಕೆ ಧಾವಿಸಿ ಬಂದು, 2ನೇ ಸಂಖ್ಯೆಯ ಆಪಾದಿತ ಮತ್ತು 3ನೇ ಸಂಖ್ಯೆಯ ಆಪಾದಿತನು ಕೃಷಿ ಭೂಮಿಯ ಸರಹದ್ದು ವಿವಾದಕ್ಕೆ ಸಂಬಂಧಿಸಿದಂತೆ ಮೃತರಿಬ್ಬರೊಂದಿಗೆ ಜಗಳವಾಡುತ್ತಿರುವುದನ್ನು ಕಂಡ; 1ನೇ ಆಪಾದಿತನು (ಆರ್.ಹೆಚ್.ಕೇಶವ) ಗಡಪಾರಿಯಿಂದ ಗೋಪಾಲರೆಡ್ಡಿಯ ಮೇಲೆ ಹಲ್ಲೆ ಮಾಡಿದ; 2ನೇ ಆಪಾದಿತ– ಹನುಮಂತಪ್ಪ ಚೂಪಾದ ಚೂರಿಯಿಂದ

ಸೋಮಶೇಖರ ರೆಡ್ಡಿಗೆ ಇರಿದ; ಗೋವಿಂದಪ್ಪ (3ನೇ ಆಪಾದಿತ) ಗೋಪಾಲರೆಡ್ಡಿಯ ಕೈಗಳನ್ನು ಹಿಂದಿನಿಂದ ಬಿಗಿಯಾಗಿ ಹಿಡಿದುಕೊಂಡಿದ್ದ; ಆ ಸಮಯದಲ್ಲಿ ಫಿರ್ಯಾದುದಾರ ಸ್ವಲ್ಪ ದೂರದಲ್ಲಿ ನಿಂತು ಆ ಘಟನೆಯನ್ನು ನೋಡುತ್ತಿದ್ದ. ಏಕೆಂದರೆ ಆ ಪ್ರಶ್ನಿತ ಘಟನೆಯ ಬಗ್ಗೆ ಆತನಿಗೆ ಭಯವಿತ್ತು; ಘಟನೆಯನ್ನು ನೋಡಿದ ನಂತರ ಫಿರ್ಯಾದುದಾರನು ಜೋರಾಗಿ ಕಿರುಚಿಕೊಂಡ; ಆನಂತರ ಕೂಡಲೇ ಪಿ.ಡಬ್ಲ್ಯೂ.–2 ಮತ್ತು 3 ಹಾಗೂ ಬಲರಾಮ್ ಸ್ಥಳಕ್ಕೆ ಬಂದರು ಮತ್ತು ಎಲ್ಲಾ ಜನರನ್ನು ನೋಡಿದ ಆಪಾದಿತರು ಘಟನಾ ಸ್ಥಳದಿಂದ ಓಡಿಹೋದರು. ತಕ್ಷಣವೇ ಪಿ.ಡಬ್ಲ್ಯೂ–2 ಮತ್ತು 3 ಹಾಗೂ ಪಿ.ಡಬ್ಲ್ಯೂ–1 ಗಾಯಾಳುಗಳಿಬ್ಬರೂ ಬಿದ್ದಿದ್ದ ಘಟನಾ ಸ್ಥಳಕ್ಕೆ ಹೋಗಿ ಅಲ್ಲಿ ಅವರಿಬ್ಬರಿಗೂ ಹಲವು ಗಾಯಗಳಾಗಿರುವುದನ್ನು ಕಂಡರು; ಕೂಡಲೇ ಅವರು ಜೀಪನ್ನು ತಂದು ಗಾಯಾಳುಗಳಿಬ್ಬರನ್ನೂ ಸೇಂಟ್‌ಜಾನ್ಸ್ ಆಸ್ಪತ್ರೆಗೆ ತಂದರು. ಅವರು ಸೇಂಟ್‌ಜಾನ್ಸ್ ಆಸ್ಪತ್ರೆಗೆ ಹೋಗುವಾಗ ಮಾರ್ಗ ಮಧ್ಯದಲ್ಲಿ ನಾರಾಯಣ ಹೃದಯಾಲಯ ಆಸ್ಪತ್ರೆಗೂ ಹೋಗಿದ್ದರು. ಅಲ್ಲಿ ನಾರಾಯಣ ಹೃದಯಾಲಯ ಆಸ್ಪತ್ರೆಯ ಅಧಿಕಾರಿಗಳು ಗಾಯಾಳುಗಳನ್ನು ಸೇಂಟ್‌ಜಾನ್ಸ್ ಆಸ್ಪತ್ರೆಗೆ ಕೊಂಡೊಯ್ಯುವಂತೆ ಫಿರ್ಯಾದುದಾರರು ಮತ್ತು ಇತರರಿಗೆ ಸಲಹೆ ಮಾಡಿದರು. ಸೇಂಟ್‌ಜಾನ್ಸ್ ಆಸ್ಪತ್ರೆಯ ವೈದ್ಯರು ಗಾಯಾಳುಗಳಿಬ್ಬರನ್ನೂ ಪರೀಕ್ಷಿಸಿ ಅವರು ಮೃತರಾಗಿದ್ದಾರೆಂದು ಘೋಷಿಸಿದರು. ಪಿ.ಡಬ್ಲ್ಯೂ.–1 (ಫಿರ್ಯಾದುದಾರ) ತನ್ನ ಹಳ್ಳಿಗೆ ವಾಪಸ್ ಬಂದು, ದೂರನ್ನು ಬರೆದು, ತದನಂತರ ಹೆಬ್ಬಗೋಡಿ ಪೊಲೀಸ್ ಠಾಣೆಗೆ ಹೋಗಿ, 25.05.2004ರ ಬೆಳಗ್ಗೆ 10.00 ಗಂಟೆಗೆ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಮುಂದೆ (ಪಿ.ಡಬ್ಲ್ಯೂ.–6) ಫಿರ್ಯಾದನ್ನು ದಾಖಲಿಸಿದರು. ಪಿ.ಎಸ್.ಐ. ಅದನ್ನು ಅಪರಾಧ ಸಂಖ್ಯೆ 237/2004ರಲ್ಲಿ ನೋಂದಾಯಿಸಿಕೊಂಡರು. ಪ್ರಥಮ ಮಾಹಿತಿ ವರದಿಯು ಅದೇ ದಿನ ಮಧ್ಯಾಹ್ನ 2.00 ಗಂಟೆಗೆ ನ್ಯಾಯಿಕ ಅಧಿಕಾರವುಳ್ಳ ಮ್ಯಾಜಿಸ್ಟ್ರೇಟರಿಗೆ ತಲುಪಿತು. ಪೊಲೀಸರು ತನಿಖೆಯನ್ನು ಕೈಗೆತ್ತಿಕೊಂಡರು. ಎಲ್ಲಾ ತನಿಖೆ ವಿಧಿವಿಧಾನಗಳು ಪೂರ್ಣಗೊಂಡ ನಂತರ, ಮೂವರು ಆಪಾದಿತರ ವಿರುದ್ಧ ಭಾರತದಂಡ ಸಂಹಿತೆ (ಐ.ಪಿ.ಸಿ.) ಸೆಕ್ಷನ್ 34ರೊಂದಿಗೆ ಓದಿಕೊಂಡಂತೆ ಸೆಕ್ಷನ್ 302ರ ಅಡಿಯಲ್ಲಿನ ಅಪರಾಧಗಳಿಗಾಗಿ ಆರೋಪ ಪಟ್ಟಿಯನ್ನು ಸಲ್ಲಿಸಿದರು.

3. ಆರೋಪಿಗಳಿಗೆ ಸೆಷನ್ಸ್ ಮೊಕದ್ದಮೆ ಸಂಖ್ಯೆ 255/2004ರಲ್ಲಿ ಐ.ಪಿ.ಸಿ. ಸೆಕ್ಷನ್ 34ರೊಂದಿಗೆ ಓದಿಕೊಂಡಂತೆ ಸೆಕ್ಷನ್ 302ರ ಅಡಿಯಲ್ಲಿನ ಅಪರಾಧಗಳ ಆರೋಪವನ್ನು ಹೊರಿಸಲಾಯಿತು. ಅಧಿವಿಚಾರಣೆಯ ಸಂದರ್ಭದಲ್ಲಿ ಪ್ರಾಸಿಕ್ಯೂಷನ್ ಎಲ್ಲಾ 28 ಸಾಕ್ಷಿದಾರರನ್ನು ಪರಿಶೀಲನೆ ಮಾಡಿತು ಮತ್ತು 39 ನಿಶಾನೆಗಳು ಹಾಗೂ 26 ಮುಖ್ಯ ಸಾಕ್ಷಿಯ ವಸ್ತುಗಳನ್ನು ಗುರುತು ಮಾಡಿಸಿತು. ಪ್ರತಿವಾದಿಯ ಪರವಾಗಿ ಯಾವುದೇ ಸಾಕ್ಷಿಯನ್ನು ಪರಿಶೀಲಿಸಿಲ್ಲ. ಆದರೆ, ನಾಲ್ಕು ನಿಶಾನೆಗಳನ್ನು ಗುರುತು ಮಾಡಿಸಲಾಯಿತು. ಆಪಾದಿತರ ಹೇಳಿಕೆಯನ್ನು ದಾಖಲಿಸುವ ಸಂದರ್ಭದಲ್ಲಿ 1 ಮತ್ತು 3ನೇ ಆಪಾದಿತರು ಲಿಖಿತ ಹೇಳಿಕೆಗಳನ್ನು ಕೂಡ ಸಲ್ಲಿಸಿದ್ದರು. ಅಧಿವಿಚಾರಣಾ ನ್ಯಾಯಾಲಯವು ದಾಖಲೆಯಲ್ಲಿರುವ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಿದ ಮೇಲೆ ಮತ್ತು ಅಹವಾಲನ್ನು ಆಲಿಸಿದ ನಂತರ ಐ.ಪಿ.ಸಿ. ಸೆಕ್ಷನ್ 34ರೊಂದಿಗೆ ಓದಿಕೊಂಡಂತೆ ಸೆಕ್ಷನ್ 302ರ ಅಡಿಯಲ್ಲಿನ ಅಪರಾಧಗಳಿಗಾಗಿ ಆಪಾದಿತರೆಲ್ಲರನ್ನೂ ಖುಲಾಸೆಗೊಳಿಸಿತು; ಆದರೆ 1ನೇ ಆಪಾದಿತನನ್ನು ಐ.ಪಿ.ಸಿ. ಸೆಕ್ಷನ್ 304–IIರ ಅಡಿಯಲ್ಲಿನ ಅಪರಾಧಕ್ಕಾಗಿ ಅಪರಾಧ ನಿರ್ಣೀತತನ್ನಾಗಿಸಿ, ಆತನಿಗೆ 5 ವರ್ಷಗಳ ಕಾರವಾಸ ಶಿಕ್ಷೆಗೆ ಒಳಗಾಗುವಂತೆ ಮತ್ತು 2,00,000/– ರೂ.ಗಳ ಜುಲ್ಮಾನೆಯನ್ನು ಸಂದಾಯ ಮಾಡುವಂತೆ ಶಿಕ್ಷೆಯನ್ನು ವಿಧಿಸಿತು.

4. ಪಿ.ಡಬ್ಲ್ಯೂ.–1 ಸಿ.ಮುನಿರಾಜು ಮೃತನ ಕಿರಿಯ ಸಹೋದರನಾಗಿರುತ್ತಾನೆ. ಆತನು ದಿನಾಂಕ 25.05.2004ರಂದು ಬೆಳಗ್ಗೆ 10.00 ಗಂಟೆಗೆ ಪಿ.ಡಬ್ಲ್ಯೂ–26ರ ಮುಂದೆ ದೂರನ್ನು ಸಲ್ಲಿಸಿದ್ದು, ಪಿ.ಡಬ್ಲ್ಯೂ–26 ಆ ದೂರನ್ನು ನೋಂದಾಯಿಸಿಕೊಂಡಿರುತ್ತಾನೆ. ಅಪರಾಧ ಸ್ಥಳದ ಮಹಜರು ನಿ.ಪಿ.2 ಕ್ಕೂ ಸಹ ಆತನು ಸಾಕ್ಷಿದಾರನಾಗಿದ್ದಾನೆ. ಆತನು ಪ್ರಶ್ನಿತ ಘಟನೆಗೆ ಪ್ರತ್ಯಕ್ಷ ಸಾಕ್ಷಿಯೆಂದು ಹೇಳಲಾಗಿದೆ. ಪಿ.ಡಬ್ಲ್ಯೂ–2 ರವೀಂದ್ರಯ್ಯ ಮೃತರ ಮತ್ತೊಬ್ಬ ಸಹೋದರನಾಗಿದ್ದಾನೆ. ಆತನೂ ಕೂಡ ಪ್ರಶ್ನಿತ ಘಟನೆಗೆ ಪ್ರತ್ಯಕ್ಷ ಸಾಕ್ಷಿಯೆಂದು ಹೇಳಲಾಗಿದೆ. ಪಿ.ಡಬ್ಲ್ಯೂ–3 ಮುನಿರೆಡ್ಡಿ ಮೃತರೀರ್ವರ ಮತ್ತೊಬ್ಬ ಸಹೋದರನಾಗಿದ್ದು, ಆತನೂ ಸಹ ಪಿ.ಡಬ್ಲ್ಯೂ–1 ಮತ್ತು 2ರೊಂದಿಗೆ ಅಪರಾಧ ಸ್ಥಳದ ಬಳಿ ಹಾಜರಿದ್ದನೆಂದು ಹೇಳಲಾಗಿದ್ದು, ಹಾಗಾಗಿ ಆತನನ್ನು ಪ್ರತ್ಯಕ್ಷ ಸಾಕ್ಷಿಯೆಂದು ಹೇಳಲಾಗಿದೆ.

ಪಿ.ಡಬ್ಲ್ಯೂ–4 ಮಂಜುನಾಥ ರೆಡ್ಡಿ ಪಿ.ಡಬ್ಲ್ಯೂ–1 ರಿಂದ 3ರವರೆಗಿನ ವ್ಯಕ್ತಿಗಳ ಮತ್ತು ಮೃತರ ಸ್ನೇಹಿತರಾಗಿರುತ್ತಾನೆ. ಈತನು ಮೃತನ ಕಾರ್ಖಾನೆಯಿಂದ ಸುಮಾರು ಅರ್ಧ ಕಿಲೋಮೀಟರ್ ದೂರದಲ್ಲಿರುವ ತನ್ನ ಕಾರ್ಖಾನೆಯಲ್ಲಿ ಅಳವಡಿಸಿದ್ದ ಟ್ರಾನ್ಸ್‌ಫಾರ್ಮರ್‌ನಲ್ಲಿನ ತೊಂದರೆಯನ್ನು ಸರಿಪಡಿಸುವುದಕ್ಕಾಗಿ ಮೃತನ ಮತ್ತು ಪಿ.ಡಬ್ಲ್ಯೂ–1 ಮತ್ತು ಪಿ.ಡಬ್ಲ್ಯೂ–2 ಇವರ ಸಹಾಯವನ್ನು ಪಡೆಯುವುದಕ್ಕಾಗಿ ಆಕಸ್ಮಿಕವಾಗಿ ಅಲ್ಲಿಗೆ ಬಂದಿದ್ದ. ಆತನೂ ಸಹ ಘಟನೆಗೆ ಪ್ರತ್ಯಕ್ಷ ಸಾಕ್ಷಿಯೆಂದು ಹೇಳಲಾಗಿದೆ. ಘಟನೆ ನಡೆದ ಕೂಡಲೇ ಇಬ್ಬರೂ ಗಾಯಾಳುಗಳನ್ನು ಪಿ.ಡಬ್ಲ್ಯೂ.4 ಚಾಲನೆ ಮಾಡುತ್ತಿದ್ದ ಜೀಪಿನಲ್ಲಿ ಮೊದಲಿಗೆ ನಾರಾಯಣ ಹೃದಯಾಲಯ ಆಸ್ಪತ್ರೆಗೆ ತರಲಾಯಿತು. ತದನಂತರ, ಪಿ.ಡಬ್ಲ್ಯೂ–4, ತನ್ನ ಬಳಿ ಚಾಲನಾ ಪರವಾನಗಿ ಇಲ್ಲದಿರುವುದರಿಂದ, ತತ್ಪರಿಣಾಮವಾಗಿ ಬೆಂಗಳೂರು ನಗರದಲ್ಲಿನ ವಾಹನ ದಟ್ಟಣೆಯಲ್ಲಿ ಚಾಲನೆ ಮಾಡಲು ಭಯವಾಗುವುದರಿಂದ ಸೇಂಟ್‌ಜಾನ್ಸ್ ಆಸ್ಪತ್ರೆಗೆ ಜೀಪನ್ನು ಚಾಲನೆ ಮಾಡುವಂತೆ ನಾರಾಯಣ ಹೃದಯಾಲಯದ ಆಂಬುಲೆನ್ಸ್ ಡ್ರೈವರ್ ಸೋಮಶೇಖರ್ ರೆಡ್ಡಿಯನ್ನು (ಪಿ.ಡಬ್ಲ್ಯೂ.15) ವಿನಂತಿಸಿಕೊಂಡ.

ಪಿ.ಡಬ್ಲ್ಯೂ–5 ಡಾ.ನಾರಾಯಣ ರೆಡ್ಡಿ ಮೃತ ಸಂಬಂಧಿಯಾಗಿದ್ದು ಮತ್ತು ಅವರ ಕುಟುಂಬ ವೈದ್ಯರಾಗಿದ್ದಾರೆ. ಬೆಳಗ್ಗೆ 8.30ಕ್ಕೆ ಪಿ.ಡಬ್ಲ್ಯೂ.1ರಿಂದ ದೂರವಾಣಿ ಕರೆ ಬಂತು ಮತ್ತು ಅವರಿಗೆ ಘಟನೆಯ ಬಗ್ಗೆ ತಿಳಿದುಬಂತು. ಅವರು ತನ್ನ ಗ್ರಾಮದಿಂದ ಮುಖ್ಯರಸ್ತೆಗೆ ಬಂದರು, ಅಲ್ಲಿಗೆ ಬೆಳಿಗ್ಗೆ 8.15ಕ್ಕೆ ಪಿ.ಡಬ್ಲ್ಯೂ.–1 ಮತ್ತು ಇತರರೊಂದಿಗೆ ಮೃತರಿಬ್ಬರನ್ನು ಹೊತ್ತ ಜೀಪು ಬಂತು. ಪಿ.ಡಬ್ಲ್ಯೂ–5 ಸೇಂಟ್‌ಜಾನ್ಸ್ ಆಸ್ಪತ್ರೆಗೆ ತನ್ನ ಸ್ಕೂಟರ್‌ನಲ್ಲಿ ಸದರಿ ಜೀಪನ್ನು ಹಿಂಬಾಲಿಸಿದರು. ಪಿ.ಡಬ್ಲ್ಯೂ–5 ಪ್ರಕಾರ, ಮೃತ ಗೋಪಾಲರೆಡ್ಡಿ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ, ಆದರೆ ಸೋಮಶೇಖರ ರೆಡ್ಡಿ ಕ್ಷೀಣ ಧ್ವನಿಯಲ್ಲಿ ಮಾತನಾಡಲು ಶಕ್ತನಾಗಿದ್ದ. ಆತನಿಂದ ತಿಳಿದುಬಂದಿದ್ದೇನೆಂದರೆ, ಆತನ ಮತ್ತು ಗೋಪಾಲರೆಡ್ಡಿ ಮೇಲೆ ಆ ಎಲ್ಲಾ ಮೂರು ಆರೋಪಿಗಳು ಹಲ್ಲೆ ಮಾಡಿದರು ಎಂದು ತಿಳಿದುಬಂತು ಎಂದು ಹೇಳಿದ್ದಾರೆ. ಆ ನಂತರ ಅವರು ಸೇಂಟ್‌ಜಾನ್ಸ್ ಆಸ್ಪತ್ರೆಯಲ್ಲಿ ಗಾಯಾಳುಗಳಿಬ್ಬರನ್ನು

ಪರೀಕ್ಷಿಸುವಂತೆ ಏರ್ಪಾಟು ಮಾಡಿದರು ಮತ್ತು ತದನಂತರ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷಾ ವರದಿ ಪಡೆಯುವುದಕ್ಕೆ ಏರ್ಪಾಟು ಮಾಡಿದರು. ಮುಖ್ಯವಾಗಿ, ಪಿ.ಡಬ್ಲ್ಯೂ–5 ಮುಂದೆ ಸೋಮಶೇಖರ ರೆಡ್ಡಿ ನೀಡಿದನೆಂದು ಹೇಳಲಾದ ಮರಣಕಾಲದ ಹೇಳಿಕೆಯನ್ನು ರುಜುವಾತುಪಡಿಸುವ ಉದ್ದೇಶಕ್ಕಾಗಿ ಪಿ.ಡಬ್ಲ್ಯೂ–5 ಅನ್ನು ವಿಚಾರಣೆ ಮಾಡಲಾಯಿತು.

ಪಿ.ಡಬ್ಲ್ಯೂ–6 ಡಾ: ವಿಜಯ ಭಾಸ್ಕರ್ 25.05.2004ರಂದು 1ನೇ ಆರೋಪಿಗೆ ಚಿಕಿತ್ಸೆ ನೀಡಿದ್ದಾರೆ; 1ನೇ ಸಂಖ್ಯೆಯ ಆರೋಪಿಗೂ ಕೂಡ ಅಂಗೈ ಮತ್ತು ಮಣಿಕಟ್ಟಿನ ಮೇಲೆ ಎರಡು ಗಂಭೀರವಲ್ಲದ ಗಾಯಗಳಾಗಿತ್ತು. ಪಿ.ಡಬ್ಲ್ಯೂ–7 ಆರ್.ವಿ.ಗೋಪಾಲರೆಡ್ಡಿ, ಗೋಪಾಲರೆಡ್ಡಿಯ ಮೃತದೇಹದ ಶವಪಂಚನಾಮೆಯ (ನಿ.ಪಿ.12) ಮಹಜರ್ ಸಾಕ್ಷಿಯಾಗಿದ್ದಾರೆ. ಪಿ.ಡಬ್ಲ್ಯೂ–8 ಕೇಶವರೆಡ್ಡಿ ಸೋಮಶೇಖರ್ ರೆಡ್ಡಿಯ ಮೃತದೇಹದ ಶವಪರೀಕ್ಷಾ ವರದಿ (ನಿ.ಪಿ–13) ಶವಪಂಚನಾಮೆಯ ಮತ್ತೊಬ್ಬ ಪಂಚರಾಗಿದ್ದಾರೆ.

ಪಿ.ಡಬ್ಲ್ಯೂ–9 ಕೆ.ಆರ್.ನಾಗರಾಜರೆಡ್ಡಿ 12.05.2004ರಂದು ಸರ್ವೇಯರ್ ಮೂಲಕ ಸರ್ವೇ ಮಾಡಿದ ಸಾಕ್ಷಿಯಾಗಿದ್ದಾರೆ; ಅವರು, 2ನೇ ಸಂಖ್ಯೆಯ ಆರೋಪಿಯು ಸರ್ವೇ ನಂ. 154/1ರಲ್ಲಿ ಉತ್ತರದಿಂದ ದಕ್ಷಿಣಕ್ಕೆ ಎರಡು ಅಡಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದನೆಂದು ಸಾಕ್ಷಿ ನುಡಿದಿದ್ದಾರೆ. ನಿ.ಪಿ–14 ಸರ್ವೇ ವರದಿಯಾಗಿದೆ.

ಪಿ.ಡಬ್ಲ್ಯೂ–10 ರಾಜಶೇಖರ್ ನಿ.ಪಿ.15 ಮಹಜರ್ ಅಡಿಯಲ್ಲಿ ಚೂರಿ–ಮುದ್ದೆಮಾಲು 8 ವಶಪಡಿಸಿಕೊಂಡದ್ದಕ್ಕೆ ಸಾಕ್ಷಿಯಾಗಿದ್ದಾರೆ. ಸದರಿ ಚೂರಿಯನ್ನು 28.05.2004ರಂದು 3ನೇ ಸಂಖ್ಯೆಯ ಆರೋಪಿಯ ಕೋರಿಕೆಯಂತೆ ವಶಪಡಿಸಿಕೊಳ್ಳಲಾಗಿದೆ. ಅಲ್ಲದೆ, ಮುದ್ದೆಮಾಲು 6 ಚೂರಿ, ಮುದ್ದೆಮಾಲು 23 ಮತ್ತು ಮುದ್ದೆಮಾಲು 24 ಅನ್ನು 1ನೇ ಆರೋಪಿಯ ಕೋರಿಕೆಯಂತೆ ನಿ.ಪಿ.16ರ ಮಹಜರ್ ಅಡಿಯಲ್ಲಿ ವಶಪಡಿಸಿಕೊಂಡಿದ್ದು, ಅದಕ್ಕೂ ಕೂಡ ಅವರು

ಸಾಕ್ಷಿಯಾಗಿದ್ದಾರೆ. ಪಿ.ಡಬ್ಲ್ಯೂ–11 ರಾಮಸ್ವಾಮಿ ರೆಡ್ಡಿ, 2ನೇ ಆರೋಪಿಯ ಕೋರಿಕೆಯಂತೆ ಎಕ್ಸ್.ಪಿ.17 ಮಹಜರ್‌ನ ಅಡಿಯಲ್ಲಿ ವಶಪಡಿಸಿಕೊಂಡ ಮುದ್ದೆಮಾಲು 7 ಚೂರಿ ಮತ್ತು ಮುದ್ದೆಮಾಲು 25 ಮತ್ತು ಮುದ್ದೆಮಾಲು 26 (ಅಂಗಿ ಮತ್ತು ಲುಂಗಿ) ವಶಾವಣೆ ಮಹಜರ್‌ಗೆ ಸಾಕ್ಷಿಯಾಗಿದ್ದಾರೆ.

ಪಿ.ಡಬ್ಲ್ಯೂ–12 ನಿಕೋಲಸ್ ನಿ.ಪಿ.3 ರಿಂದ 6ರವರೆಗಿನ ಮೃತದೇಹಗಳ ಹಾಗೂ ಇತರ ಛಾಯಾಚಿತ್ರಗಳನ್ನು ತೆಗೆದ ಛಾಯಾಗ್ರಾಹಕರಾಗಿದ್ದಾರೆ. ನೆಗೆಟಿವ್‌ಗಳನ್ನು ನಿ.ಪಿ.3(ಎ) ಯಿಂದ ಪಿ.6 (ಎ)ಯಲ್ಲಿ ಗುರುತು ಮಾಡಲಾಗಿದೆ.

ಪಿ.ಡಬ್ಲ್ಯೂ–13 ಪ್ರಭುದೇವ್ ಬಿ.ಗೌಡ, ಚಂದ್ರಪುರದ ವೈದ್ಯಕೀಯ ಅಧಿಕಾರಿಯಾಗಿದ್ದಾರೆ. ಅವರು, 28.5.2004ರಂದು ಸಂಜೆ 5.00 ಗಂಟೆಗೆ ಸಿ.ಡಬ್ಲ್ಯೂ–36 ಹೆಬ್ಬಗೋಡಿ ಪೊಲೀಸ್ ಠಾಣೆಯ ಕಾನ್ಸ್‌ಟೇಬಲ್ ಕರೆದುಕೊಂಡು ಬಂದಿದ್ದ 1ನೇ ಸಂಖ್ಯೆಯ ಆರೋಪಿಯನ್ನು ಪರೀಕ್ಷಿಸಿದ್ದಾರೆ. 1ನೇ ಆರೋಪಿಯು ಎರಡು ಕೆತ್ತಿದ ಗಾಯಗಳಿಂದ ಬಳಲುತ್ತಿದ್ದನೆಂದು ಅವರು ಹೇಳಿದ್ದಾರೆ.

ಪಿ.ಡಬ್ಲ್ಯೂ–14 ಸಿ.ಎನ್.ಸುಮಂಗಲ, ನಿ.ಪಿ.20ರ ಅನುಸಾರ, ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರದಲ್ಲಿ 25.5.2004ರಂದು ಸೋಮಶೇಖರ್ ರೆಡ್ಡಿಯ ಮೃತದೇಹದ ಮರಣೋತ್ತರ ಪರೀಕ್ಷೆಯನ್ನು ನಡೆಸಿದವರಾಗಿದ್ದಾರೆ. ಆಕೆಯು 25.5.2004ರ ಮಧ್ಯಾಹ್ನ 3.30 ರಿಂದ 4.30 ರವರೆಗೆ ನಿಶಾನೆ ಪಿ.21ರ ಅನುಸಾರ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರದಲ್ಲಿ ಗೋಪಾಲ ರೆಡ್ಡಿಯ ಮೃತದೇಹದ ಮರಣೋತ್ತರ ಪರೀಕ್ಷೆಯನ್ನು ಕೂಡ ನಡೆಸಿದ್ದಾರೆ. ಆಕೆ 16.6.2004ರಂದು ಮುದ್ದೆಮಾಲು 6, 7 ಮತ್ತು 8 ಆಯುಧಗಳ ಪರಿಶೀಲನೆಯನ್ನು ಮಾಡಿ ನಿ.ಪಿ.22 ರ ವರದಿಯನ್ನೂ ನೀಡಿದ್ದಾರೆ.

ಪಿ.ಡಬ್ಲ್ಯೂ–15 ಸೋಮಶೇಖರ ರೆಡ್ಡಿ ಆಂಬುಲೆನ್ಸ್ ಚಾಲಕನಾಗಿದ್ದು, ಆತನು ಪಿ.ಡಬ್ಲ್ಯೂ–4 ಮತ್ತು ಇತರ ಕೋರಿಕೆಯಂತೆ 25.5.2004ರಂದು ಬೆಳಗ್ಗೆ

8.15ಕ್ಕೆ ನಾರಾಯಣ ಹೃದಯಾಲಯ ಆಸ್ಪತ್ರೆಯಿಂದ ಬೆಂಗಳೂರಿನ ಸೇಂಟ್‌ಜಾನ್ಸ್ ಆಸ್ಪತ್ರೆಗೆ ಜೀಪನ್ನು ಚಾಲನೆ ಮಾಡಿದ್ದಾನೆ. ಪಿ.ಡಬ್ಲ್ಯೂ.5 ಡಾ: ನಾರಾಯಣ ರೆಡ್ಡಿ ಮಡಿವಾಳದಲ್ಲಿ ಜೀಪಿಗೆ ಹತ್ತಿಕೊಂಡರೆಂದೂ ಕೂಡ ಆತನು ಸಾಕ್ಷಿ ಹೇಳಿದ್ದಾನೆ. ಆದರೆ, ಪಿ.ಡಬ್ಲ್ಯೂ–5 ಯಾರೊಂದಿಗೆ ಮಾತನಾಡಿದರು ಎಂಬುದನ್ನು ಆತ ಗಮನಿಸಿಲ್ಲ.

ಪಿ.ಡಬ್ಲ್ಯೂ–16 ಸತೀಶ್ ದಿನಾಂಕ 25.5.2004ರ ಅಪರಾಧ ಘಟನಾ ಸ್ಥಳದ ಪಂಚನಾಮೆ ನಿ.ಪಿ.2ರ ಮಹಜರ್ ಸಾಕ್ಷಿಯಾಗಿದ್ದಾನೆ. ಸದರಿ ಪಂಚನಾಮೆ ಅಡಿಯಲ್ಲಿ ಮುದ್ದೆಮಾಲು ಸಂ.3ರಿಂದ 6ರವರೆಗೆ ವಶಪಡಿಸಿಕೊಳ್ಳಲಾಗಿದೆ. ಆತನು 28.5.2004ರಂದು ಯಾವುದರ ಅಡಿಯಲ್ಲಿ ಎಂ.ಓ. ಸಂ. 8, 21 ಮತ್ತು 22 ಅನ್ನು ವಶಪಡಿಸಿಕೊಳ್ಳಲಾಯಿತೋ ಆ ನಿ.ಪಿ 15ಕ್ಕೂ ಕೂಡ ಸಾಕ್ಷಿಯಾಗಿದ್ದಾನೆ. ಯಾವುದರ ಅಡಿಯಲ್ಲಿ ಮುದ್ದೆಮಾಲು ಸಂ. 6, 23, ಮತ್ತು 24 ಅನ್ನು ವಶಪಡಿಸಿಕೊಳ್ಳಲಾಯಿತೋ ಆ ನಿ.ಪಿ.16 ವಶಾವಣೆ ಮಹಜರಿಗೂ ಕೂಡ ಆತನು ಸಾಕ್ಷಿಯಾಗಿದ್ದಾನೆ.

ಪಿ.ಡಬ್ಲ್ಯೂ–17 ಹೆಚ್.ಎಂ. ರುದ್ರಪ್ಪ, 25.5.2004ರಂದು ನ್ಯಾಯಾಲಯಕ್ಕೆ ಪ್ರಥಮ ಮಾಹಿತಿ ವರದಿ (ಎಫ್.ಐ.ಆರ್) ಯನ್ನು ತೆಗೆದುಕೊಂಡು ಬಂದ ಪೊಲೀಸ್ ಕಾನ್ಸ್‌ಟೇಬಲ್ ಆಗಿದ್ದಾನೆ. ಪಿ.ಡಬ್ಲ್ಯೂ–18 ನಾಗರಾಜು, ವಿಕ್ಟೋರಿಯಾ ಆಸ್ಪತ್ರೆಯಿಂದ ಮರಣೋತ್ತರ ಪರೀಕ್ಷಾ ವರದಿಗಳನ್ನು– ನಿಶಾನೆ ಪಿ.20 ಮತ್ತು 21 ಅನ್ನು ಪಡೆದುಕೊಂಡು ತನಿಖಾ ಪ್ರಕ್ರಿಯೆಯಲ್ಲಿ ಭಾಗಿಯಾದ ಪೊಲೀಸ್ ಕಾನ್ಸ್‌ಟೇಬಲ್ ಆಗಿದ್ದಾನೆ. ಆತನು ನಿ.ಪಿ.23 ಅಡಿಯಲ್ಲಿ ಪಿ.ಎಫ್.ಗೆ ಒಳಪಟ್ಟ ಮೃತ ದೇಹಗಳ ಬಟ್ಟೆಗಳು ಮತ್ತು ಇತರ ವಸ್ತುಗಳನ್ನು ಒಳಗೊಂಡ ಮೊಹರಾದ ಪಾಕೆಟ್‌ಗಳನ್ನು ಸಾಗಿಸಿದ್ದಾನೆ.

ಪಿ.ಡಬ್ಲ್ಯೂ–19 ರಾಜಶೇಖರ್ 1.6.2004ರಂದು 2ನೇ ಸಂಖ್ಯೆಯ ಆರೋಪಿಯ ಕೋರಿಕೆಯಂತೆ, ಯಾವುದರ ಅಡಿಯಲ್ಲಿ ಮುದ್ದೆಮಾಲು ಸಂ.7, 25 ಮತ್ತು 26

ಅನ್ನು ವಶಪಡಿಸಿಕೊಂಡು ಅಭಿಗ್ರಹಿಸಲಾಯಿತೋ ಆ ನಿ.ಪಿ.17ರ ವಶಾವಣೆ ಪಂಚನಾಮೆಯ ಮಹಜರ್ ಸಾಕ್ಷಿಯಾಗಿದ್ದಾನೆ. ಪಿ.ಡಬ್ಲ್ಯೂ.20 ಬಿ.ಎಂ.ಮುನಿರಾಜು, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತ ಗೋಪಾಲರೆಡ್ಡಿಯ ಮೃತದೇಹವನ್ನು ಪಹರೆ ಕಾಯುತ್ತಿದ್ದ ಪೊಲೀಸ್ ಕಾನ್ಸ್‌ಟೇಬಲ್ ಆಗಿದ್ದಾನೆ. ಪಿ.ಡಬ್ಲ್ಯೂ–21 ಯಲ್ಲಪ್ಪ ಪ್ರತಿಕೂಲ ಸಾಕ್ಷಿಯಾಗಿ ಬದಲಾಗಿದ್ದಾನೆ. ಘಟನೆ ನಡೆದ ಸಮಯದಲ್ಲಿ ತಾನು ಮನೆಯಲ್ಲಿಯೇ ಇದ್ದೆ ಎಂದು ಆತನು ಸಾಕ್ಷಿ ನುಡಿದಿರುವ ಮಟ್ಟಿಗೆ ಪ್ರಾಸಿಕ್ಯೂಷನ್ ವಾದವನ್ನು ಆತ ಬೆಂಬಲಿಸಿಲ್ಲ. ಪಿ.ಡಬ್ಲ್ಯೂ–22 ಶ್ರೀ ರೇವಣ್ಣ, 12.7.2004ರಂದು ನಿ.ಪಿ.25ರ ಪಾಸ್‌ಪೋರ್ಟ್ ಮೇಲೆ ಬೆಂಗಳೂರಿನ ಎಫ್.ಎಸ್.ಎಲ್.ಗೆ 21 ಮೊಹರಾದ ವಸ್ತುಗಳನ್ನು ತೆಗೆದುಕೊಂಡು ಹೋದ ಪೊಲೀಸ್ ಕಾನ್ಸ್‌ಟೇಬಲ್ ಆಗಿದ್ದಾನೆ. ಪಿ.ಡಬ್ಲ್ಯೂ–23 ಶ್ರೀನಿವಾಸ್, ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರದಲ್ಲಿ ಸೋಮಶೇಖರ್ ರೆಡ್ಡಿಯ ಮೃತದೇಹದ ಪಹರೆ ಕಾದ ಹೆಡ್‌ಕಾನ್ಸ್‌ಟೇಬಲ್ ಆಗಿದ್ದಾನೆ. ಪಿ.ಡಬ್ಲ್ಯೂ–24 ಹನುಮಂತಪ್ಪ ತನಿಖೆ ನಡೆಸಿ, ಆರೋಪ ಪಟ್ಟಿಯನ್ನು ದಾಖಲಿಸಿದ ತನಿಖಾಧಿಕಾರಿ ಆಗಿದ್ದಾನೆ. ಆರಂಭದಲ್ಲಿ ತನಿಖೆಯನ್ನು ಪೊಲೀಸ್ ಅಧಿಕಾರಿಯಾಗಿದ್ದ ಸಿ.ಡಬ್ಲ್ಯೂ–44 ನಾಗರಾಜ್ ಎಸ್. ಮಾಡಿದ್ದರು ಎಂಬುದನ್ನು ಇಲ್ಲಿ ಗಮನಿಸುವುದು ಸೂಕ್ತ.

ಪಿ.ಡಬ್ಲ್ಯೂ–25 ಆರ್.ಅರುಣ್ 12.5.2004ರಂದು ಸರ್ವೆ ನಂ. 154/1ರ ಭೂಮಿಯನ್ನು ಸರ್ವೆ ಮಾಡಿದ ತಾಲ್ಲೂಕು ಸರ್ವೇಯರ್ ಆಗಿದ್ಧಾನೆ ಮತ್ತು ಆತನ ವರದಿಯು ನಿ.ಪಿ.14 ಆಗಿದೆ. ನಿ.ಪಿ.32 ಆತನು ಸಿದ್ಧಪಡಿಸಿದ ನಕ್ಷೆಯಾಗಿದೆ.

ಪಿ.ಡಬ್ಲ್ಯೂ–26 ನಾಗರಾಜ್ ಎಸ್. ಹೆಬ್ಬಗೋಡಿ ಪೊಲೀಸ್ ಠಾಣೆಯ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಆಗಿದ್ದಾನೆ. ಈತನು 25.5.2004ರಂದು ಬೆಳಗ್ಗೆ 10.00 ಗಂಟೆಗೆ ಪಿ.ಡಬ್ಲ್ಯೂ.1 ಸಲ್ಲಿಸಿದ ದೂರನ್ನು ಸ್ವೀಕರಿಸಿ, ಅದನ್ನು ಐ.ಪಿ.ಸಿ. ಸೆಕ್ಷನ್ 302ರ ಅಡಿಯಲ್ಲಿನ ಅಪರಾಧಗಳಿಗಾಗಿ ಕ್ರೈಂ. ನಂ. 237/2004ರ ಅಡಿಯಲ್ಲಿ ನೋಂದಾಯಿಸಿಕೊಂಡಿದ್ದಾನೆ. ದೂರು ನಿ.ಪಿ.1 ಆಗಿದೆ. ದೂರನ್ನು ಪಿ.ಡಬ್ಲ್ಯೂ–17 ಪೊಲೀಸ್ ಕಾನ್ಸ್‌ಟೇಬಲ್ ಮುಖಾಂತರ ನ್ಯಾಯಾಲಯಕ್ಕೆ

ಕಳುಹಿಸಲಾಯಿತು. ಆತನು 1.6.2004ರಂದು 1 ಮತ್ತು 3ನೇ ಸಂಖ್ಯೆಯ ಆರೋಪಿಗಳನ್ನು ವರ್ತೂರು ಬಸ್ ನಿಲ್ದಾಣದಲ್ಲಿ ದಸ್ತಗಿರಿ ಮಾಡಿ ಅವರನ್ನು ನಿ.ಪಿ.27ರ ತನ್ನ ವರದಿಯ ಸಹಿತ ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದನು. ಆತನು 2ನೇ ಸಂಖ್ಯೆಯ ಆರೋಪಿಯನ್ನು ಜೆ.ಪಿ.ನಗರದಲ್ಲಿ ದಸ್ತಗಿರಿ ಮಾಡಿ ಆತನನ್ನು ನಿ.ಪಿ.30ರ ತನ್ನ ವರದಿಯೊಂದಿಗೆ ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದನು.

ಪಿ.ಡಬ್ಲ್ಯೂ–27 ಡಾ: ಎಸ್.ರಾಜಣ್ಣ, ಅವರು ಬೆಂಗಳೂರಿನ ಬಿ. ಅಂಡ್ ಎಲ್.ಸಿ. ಆಸ್ಪತ್ರೆಯಲ್ಲಿ ಅಪಘಾತ ತುರ್ತು ಚಿಕಿತ್ಸಾ ವಿಭಾಗದಲ್ಲಿ ವೈದ್ಯಾಧಿಕಾರಿಯಾಗಿದ್ದಾಗ, 31.5.2004ರಂದು 2ನೇ ಆರೋಪಿಯನ್ನು ಪರೀಕ್ಷಿಸಿದ್ದಾರೆ. ಅವರು ನಿ.ಪಿ.42ರಂತೆ ಎಂ.ಎಲ್.ಸಿ. ರಿಜಿಸ್ಟರ್‌ನಲ್ಲಿ ನಮೂದುಗಳನ್ನು ದಾಖಲಿಸಿದ್ದಾರೆ. ಪಿ.ಡಬ್ಲ್ಯೂ–28 ಡಾ: ನಾಗರತ್ನ, ಆಕೆ 31.5.2004ರಂದು 2ನೇ ಆರೋಪಿಯನ್ನು ಪರೀಕ್ಷಿಸಿ, ನಿ.ಪಿ.44ರಂತೆ ಎಂ.ಎಲ್.ಸಿ. ರಿಜಿಸ್ಟರ್‌ನಲ್ಲಿ ನಮೂದುಗಳನ್ನು ದಾಖಲಿಸಿದ್ದಾರೆ.

ಪಿ.ಡಬ್ಲ್ಯೂ–27 ಮತ್ತು ಪಿ.ಡಬ್ಲ್ಯೂ–28 ಆರೋಪಪಟ್ಟಿ ಸಾಕ್ಷಿಗಳಲ್ಲವೆಂಬುದನ್ನು ಗಮನಿಸುವುದು ಇಲ್ಲಿ ಸೂಕ್ತವಾಗುತ್ತದೆ. ಆದರೆ, ಆನಂತರ ಅವರನ್ನು ಪ್ರಾಸಿಕ್ಯೂಷನ್ ವಿಚಾರಣೆ ಮಾಡಿದೆ. ಇಬ್ಬರೂ ಸಾಕ್ಷಿದಾರರು ನ್ಯಾಯಾಲಯದ ಮುಂದಿದ್ದ 2ನೇ ಆರೋಪಿಯನ್ನು ಗುರುತಿಸಲಿಲ್ಲ.

5. ಮಾನ್ಯ ಎಸ್.ಪಿ.ಪಿ. ಶ್ರೀ ವೆಂಕಟೇಶ್ ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಬೆಂಬಲಿಸಿ, ಪ್ರತ್ಯಕ್ಷ ಸಾಕ್ಷಿಗಳಾದ ಪಿ.ಡಬ್ಲ್ಯೂ–1 ರಿಂದ 4ರವರೆಗಿನ ಸಾಕ್ಷಿಗಳ ಸಾಕ್ಷಿಯು ಸಮರ್ಥ ಹಾಗೂ ಸಮಂಜಸವಾಗಿದೆ; ಆ ಸ್ಥಳದಲ್ಲಿ ಅವರ ಇರುವಿಕೆಯು ಸ್ವಾಭಾವಿಕವಾದುದಾಗಿದೆ; ಪಿ.ಡಬ್ಲ್ಯೂ–1ರಿಂದ 3 ಮೃತರ ಸಹೋದರರಾಗಿದ್ದು, ಸಹಜವಾಗಿಯೇ ಪ್ರತಿನಿತ್ಯ ಮಾಮೂಲಾಗಿ ತಮ್ಮ ಸ್ವಂತ ಇಟ್ಟಿಗೆ ಕಾರ್ಖಾನೆಯ ಬಳಿ ಇರುವಂತೆ ಆ ಘಟನೆ ನಡೆದ ದಿನಾಂಕದಲ್ಲಿಯೂ ಸಹ ಅವರು ಅಲ್ಲಿದ್ದರು,

ಪಿ.ಡಬ್ಲ್ಯೂ-4, ಪಿ.ಡಬ್ಲ್ಯೂ-1ರಿಂದ 3ರವರೆಗಿನ ವ್ಯಕ್ತಿಗಳ ಮತ್ತು ಮೃತರ ಸ್ನೇಹಿತನಾಗಿದ್ದು, ಆತನು ಪ್ರಶ್ನಿತ ಸ್ಥಳದಿಂದ ಅರ್ಧ ಕಿಲೋಮೀಟರ್ ದೂರದಲ್ಲಿರುವ ತನ್ನ ಕಾರ್ಖಾನೆಗೆ ಅಳವಡಿಸಲಾಗಿದ್ದ ಎಲೆಕ್ಟ್ರಿಕ್ ಟ್ರಾನ್ಸ್‌ಫಾರ್ಮರ್‌ನಲ್ಲಿ ಕಂಡುಬಂದ ದೋಷವನ್ನು ಸರಿಪಡಿಸಿಕೊಳ್ಳುವುದಕ್ಕಾಗಿ ನೆರವು ಕೋರಲು ಆ ಸ್ಥಳಕ್ಕೆ ಬಂದಿದ್ದ; ಎಲ್ಲಾ ಪ್ರತ್ಯಕ್ಷ ಸಾಕ್ಷಿಗಳು, ಎಲ್ಲಾ ಮೂರು ಆರೋಪಿಗಳು ಇಬ್ಬರು ಮೃತರನ್ನು ಚಾಕುಗಳಿಂದ ಹಲ್ಲೆ ಮಾಡಿದರೆಂದು ಒಂದೇ ರೀತಿಯಲ್ಲಿ ಸಾಕ್ಷ್ಯ ನುಡಿದಿದ್ದಾರೆ; ಪ್ರತಿಯೊಬ್ಬ ಆರೋಪಿಯು ಹಿಡಿದಿದ್ದ ಚಾಕುಗಳನ್ನು ಪ್ರತ್ಯಕ್ಷ ಸಾಕ್ಷಿಗಳು ನಿರ್ದಿಷ್ಟವಾಗಿ ಗುರುತಿಸಿದ್ದಾರೆ; ಗಾಯಗಳ ಸ್ವರೂಪವು ಆಳವಾದ ಇರಿತದ ಮತ್ತು ಕೆತ್ತಿದ ಗಾಯಗಳಾಗಿದ್ದು, ಅವು ಬಳಕೆ ಮಾಡಿದ ಆಯುಧಗಳೊಂದಿಗೆ ಒಂದಕ್ಕೊಂದು ಹೋಲಿಕೆಯಾಗುತ್ತವೆ; ಆ ಗಾಯುಗಳು ಪ್ರತಿವಾದಿಯು ವಾದಿಸಿದಂತೆ ಕುಡುಗೋಲಿನಿಂದ ಆಗಿರಲು ಸಾಧ್ಯವೇ ಇಲ್ಲ; ಇಬ್ಬರೂ ಮೃತರು ತಮ್ಮ ದೇಹಗಳ ಮೇಲೆ ಹಲವಾರು ಕೆತ್ತಿದ ಹಾಗೂ ಇರಿತದ ಗಾಯಗಳಿಂದ ಬಳಲಿದ್ದರು, ಆ ಕಾರಣಕ್ಕಾಗಿ ಎರಡು ಶಕ್ತಿವಂತ ದೇಹಗಳ ಮೇಲೆ ಅಷ್ಟು ಸಂಖ್ಯೆಯ ಗಾಯಗಳನ್ನು ಮಾಡಲು ಒಬ್ಬ ವ್ಯಕ್ತಿಗೆ ಸಾಧ್ಯವಾಗುವುದಿಲ್ಲ; ಕೊಲೆಯ ಉದ್ದೇಶದ ದೃಷ್ಟಿಯನ್ನೂ ಕೂಡ ಪ್ರಾಸಿಕ್ಯೂಷನ್ ಪಿ.ಡಬ್ಲ್ಯೂ-1ರಿಂದ 3ರವರೆಗಿನ ಸಾಕ್ಷಿಗಳು ಹಾಗೂ ಸರ್ವೇಯರ್ ಅನ್ನು ವಿಚಾರಣೆ ಮಾಡುವ ಮೂಲಕ ಸಾಕಷ್ಟು ಮಟ್ಟಿಗೆ ರುಜುವಾತು ಮಾಡಿದೆ; ಎಲ್ಲಾ ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷಿಯು ಸ್ವಾಭಾವಿಕವಾದುದಾಗಿವೆ; ಪ್ರತ್ಯಕ್ಷ ಸಾಕ್ಷಿಗಳ ಇರುವಿಕೆಯನ್ನು ಸಂದೇಹಪಡಲು ಸಾಧ್ಯವಿಲ್ಲದಿರುವುದರಿಂದ ಮತ್ತು ಘಟನೆ ನಡೆದ ಕೂಡಲೇ ದೂರನ್ನು ದಾಖಲಿಸಿರುವುದರಿಂದ, ಆರೋಪಿಗಳನ್ನು ಪ್ರಾಸಿಕ್ಯೂಷನ್ ಸುಳ್ಳಾಗಿ ಸಿಕ್ಕಿಸಿದೆ ಎಂದು ಹೇಳಲು ಸಾಧ್ಯವಿಲ್ಲವೆಂದು ತೀಕ್ಷ್ಣವಾಗಿ ವಾದಿಸಿದ್ದಾರೆ. ಅವರ ಪ್ರಕಾರ ಅಧಿವಿಚಾರಣಾ ನ್ಯಾಯಾಲಯವು ಸಾಕ್ಷ್ಯದ ಗುಣಾವಗುಣಗಳನ್ನು ವಿವೇಚಿಸಿರುವುದು ಹಾಗೆಯೇ ತೆಗೆದುಕೊಂಡ ನಿರ್ಣಯವು ಸಮುಚಿತವಾದುದಲ್ಲ ಹಾಗೂ ಸರಿಯಾದುದಲ್ಲ. ಆದ್ದರಿಂದ ಆ ತೀರ್ಪಿಗೆ ಮಧ್ಯಪ್ರವೇಶದ ಅಗತ್ಯವಿದೆಯೆಂದು ವಾದಿಸಿದ್ದಾರೆ.

ತದ್ವಿರುದ್ಧವಾಗಿ, ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಎಸ್.ಕೆ. ವೆಂಕಟರೆಡ್ಡಿ, ಅಧೀನ ನ್ಯಾಯಾಲಯದ ತೀರ್ಪನ್ನು ಬೆಂಬಲಿಸಿ

ವಾದ ಮಾಡಿದರು. ಪ್ರಶ್ನಿತ ಘಟನೆಗೆ ಸಂಬಂಧಿಸಿದಂತೆ ಯಾರೂ ಪ್ರತ್ಯಕ್ಷ ಸಾಕ್ಷಿಗಳಿಲ್ಲ, ಪ್ರತ್ಯಕ್ಷ ಸಾಕ್ಷಿಗಳೆಂದು ಹೇಳಲಾದ ಸಾಕ್ಷಿಗಳ ಮಟ್ಟಿಗೆ ಅವರೆಲ್ಲರೂ ಸೃಷ್ಟಿಸಿದ ಸಾಕ್ಷಿಗಳು; ಪ್ರತ್ಯಕ್ಷ ಸಾಕ್ಷಿಗಳೆಂದು ಹೇಳಲಾದ ಎಲ್ಲಾ ನಾಲ್ಕು ಸಾಕ್ಷಿಗಳನ್ನು ಪ್ರಾಸಿಕ್ಯೂಷನ್ ಸೃಷ್ಟಿಸಿದೆ ಮತ್ತು ಆ ಸ್ಥಳದಲ್ಲಿ ಅವರ ಇರುವಿಕೆಯು ಸಂದೇಹಾಸ್ಪದವಾಗಿದೆ; ಪಿ.ಡಬ್ಲ್ಯೂ–1ರಿಂದ 3ರವರೆಗಿನ ಸಾಕ್ಷಿಗಳು ಘಟನೆ ನಡೆದ ನಂತರ ಸ್ಥಳಕ್ಕೆ ಬಂದದ್ದೇ ಹೊರತು, ಘಟನೆ ನಡೆಯುವಾಗ ಅಲ್ಲ; ಪಿ.ಡಬ್ಲ್ಯೂ 1ರಿಂದ 4 ಅಷ್ಟು ಬೆಳಗ್ಗೆ ಬೆಳಗ್ಗೆಯೇ ಆ ಸ್ಥಳಕ್ಕೆ ಬರಲು ಯಾವ ಕಾರಣವೂ ಇರಲಿಲ್ಲ, ಅದರಲ್ಲೂ ವಿಶೇಷವಾಗಿ, ಪಿ.ಡಬ್ಲ್ಯೂ–2, ಆ ಸ್ಥಳದಿಂದ 22 ಕಿ.ಮೀ. ದೂರದಲ್ಲಿರುವ ಆನೇಕಲ್‌ನಲ್ಲಿ ದೈಹಿಕ ಶಿಕ್ಷಣ ಬೋಧಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ; ಪಿ.ಡಬ್ಲ್ಯೂ–4 ಆ ಕುಟುಂಬಕ್ಕೆ ಸಂಬಂಧಿಸಿದವರಲ್ಲ ಮತ್ತು ಆತನನ್ನು ಅಷ್ಟು ಬೆಳಗ್ಗೆ ಬೆಳಗ್ಗೆಯೇ ಅಪರಾಧ ಸ್ಥಳದಲ್ಲಿದ್ದನೆಂದು ನಿರೀಕ್ಷಿಸಲಾಗುವುದಿಲ್ಲ; ಪಿ.ಡಬ್ಲ್ಯೂ–1ರಿಂದ 4, ಘಟನೆಗೆ ಪ್ರತ್ಯಕ್ಷ ಸಾಕ್ಷಿಗಳಲ್ಲವೆಂದು ಮತ್ತು ಅವರು ಘಟನೆ ನಡೆದ ನಂತರ ಸ್ಥಳಕ್ಕೆ ಬಂದರೆಂದು ನಿ.ಪಿ–1 ದೂರಿನಲ್ಲಿಯೇ ಸ್ಪಷ್ಟವಾಗಿ ಕಂಡುಬರುತ್ತದೆ; ಪಿ.ಡಬ್ಲೂ–1ರಿಂದ ಪಿ.ಡಬ್ಲ್ಯೂ–4ರವರೆಗಿನ ಪ್ರತ್ಯಕ್ಷ ಸಾಕ್ಷಿದಾರರ ಸಾಕ್ಷ್ಯವು ಅಸಂಗತವಾದುದಾಗಿದ್ದು, ಅದು ಹಲವಾರು ಸುಧಾರಣೆಗಳು, ಲೋಪಗಳು ಮತ್ತು ವೈರುಧ್ಯಗಳಿಂದ ಕೂಡಿದ್ದಾಗಿದೆ; ಪಿ.ಡಬ್ಲ್ಯೂ–1ರಿಂದ ಪಿ.ಡಬ್ಲ್ಯೂ–4ರವರೆಗಿನ ಅದರಲ್ಲೂ ಹೆಚ್ಚಾಗಿ, ಪಿ.ಡಬ್ಲ್ಯೂ–1ರಿಂದ ಪಿ.ಡಬ್ಲ್ಯೂ–3ರವರೆಗಿನ ಸಾಕ್ಷಿದಾರರ ಸ್ವಂತ ಸಹೋದರರನ್ನು ಆರೋಪಿಗಳು ಕರುಣೆಯಿಲ್ಲದೆ ಹಲ್ಲೆ ಮಾಡುತ್ತಿದ್ದಾಗ ಇವರು ಮೂಕ ಪ್ರೇಕ್ಷಕರಾಗಿದ್ದರು ಎಂಬುದು ಅವರು ಘಟನೆಯ ಪ್ರತ್ಯಕ್ಷ ಸಾಕ್ಷಿಗಳಾಗಿರಲಿಲ್ಲವೇನೋ ಎಂಬಷ್ಟು ಮಟ್ಟಿಗೆ ಅವರ ವರ್ತನೆ ಅತ್ಯಂತ ಅಸ್ವಾಭಾವಿಕವಾದುದಾಗಿದೆ; ಪಿ.ಡಬ್ಲ್ಯೂ–1ರ ಹೆಚ್ಚುವರಿ ಹೇಳಿಕೆಯನ್ನು ಪೊಲೀಸರು ದಾಖಲಿಸಿಲ್ಲ, ಆದರೆ ಆನಂತರ ಯಾವುದೋ ರೀತಿಯಲ್ಲಿ ಪ್ರಾಸಿಕ್ಯೂಷನ್ ವಾದಕ್ಕೆ ಸರಿಹೊಂದಿಸಲು ಅವುಗಳನ್ನು ಸೃಷ್ಟಿಸಿದ್ದಾರೆ ಎಂದು ವಾದಿಸಿದ್ದಾರೆ. ಅವರು ಮುಂದುವರಿದು ವಾದಿಸುತ್ತಾ, ಪ್ರತಿವಾದಿಯ ವಾದವನ್ನು ಮತ್ತು ದಾಖಲೆಯಲ್ಲಿರುವ ಸಾಕ್ಷ್ಯವನ್ನು ಪರಿಶೀಲಿಸಿದರೆ, ಆ ಘಟನೆಗೆ 1ನೇ ಆರೋಪಿ ಮಾತ್ರವೇ ಕಾರಣವೆಂಬುದು ಸ್ಪಷ್ಟವಾಗುತ್ತದೆ; ಅಧಿವಿಚಾರಣಾ

ನ್ಯಾಯಾಲಯವು 2 ಮತ್ತು 3ನೇ ಆರೋಪಿಗಳನ್ನು ಖುಲಾಸೆಗೊಳಿಸಿರುವಲ್ಲಿ ಸಮರ್ಥಿತವಾದುದಾಗಿದೆ ಎಂದು ವಾದಿಸಿದರು. ಹಾಗೆಯೇ ಮುಂದುವರಿದು ವಾದಿಸಿ, 1ನೇ ಆರೋಪಿಯು ದಿನಾಂಕ 6.6.2004ರಂದು ಮದುವೆಯಾಗಬೇಕಾಗಿದ್ದ ಹುಡುಗಿಯ ಬಗ್ಗೆ ಅಸಹ್ಯವಾಗಿ ಮಾತನಾಡಿ 1ನೇ ಆರೋಪಿಯನ್ನು ಮೃತರಿಬ್ಬರೂ ರೇಗಿಸಿದ್ದರಿಂದ ಆತನು ದಿಢೀರ್ ಉದ್ರೇಕಗೊಂಡು ಆ ಅಪರಾಧಗಳನ್ನು ಮಾಡಿರುವಷ್ಟು ಮಟ್ಟಿಗೆ ಐ.ಪಿ.ಸಿ. ಸೆಕ್ಷನ್ 304–IIರ ಅಡಿಯಲ್ಲಿನ ಅಪರಾಧಗಳಿಗೆ 1ನೇ ಆರೋಪಿಯನ್ನು ಅಪರಾಧ ನಿರ್ಣೀತನನ್ನಾಗಿಸಿರುವುದರಲ್ಲಿ ಅಧಿವಿಚಾರಣಾ ನ್ಯಾಯಾಲಯವು ಸಮರ್ಥಿತವಾದುದಾಗಿದೆಯೆಂದು ಅವರು ವಾದಿಸಿದರು. ಮತ್ತು ಅವರು ವಾದವನ್ನು ಮುಂದುವರಿಸಿ, ಸ್ಥಳದಲ್ಲಿ ಕೇವಲ ಮೂರು ಜೊತೆ ಚಪ್ಪಲಿಗಳು ಮಾತ್ರ ಇರುವುದು ಕಂಡುಬಂದಿದ್ದು, ಅವು ಇಬ್ಬರು ಮೃತರು ಮತ್ತು 1ನೇ ಆರೋಪಿಗೆ ಸಂಬಂಧಪಟ್ಟವುಗಳಾಗಿವೆ; 2 ಮತ್ತು 3ನೇ ಆರೋಪಿಗಳು ಘಟನೆಯಲ್ಲಿ ಭಾಗಿಯಾಗಿದ್ದರೆ, ಅವರ ಪಾದರಕ್ಷೆಗಳೂ ಸಹ ಸ್ಥಳದಲ್ಲಿ ಬಿದ್ದಿರುತ್ತಿದ್ದವು ಎಂದು ಅವರು ವಾದಿಸಿದ್ದಾರೆ. ಇವು ಮತ್ತು ಇತರ ಆಧಾರಗಳ ಮೇಲೆ ಅವರು ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಆದೇಶವನ್ನು ಎತ್ತಿ ಹಿಡಿಯಬೇಕೆಂದು ವಾದಿಸಿದ್ದಾರೆ.

6. ನಾವು ದಾಖಲೆಯಲ್ಲಿರುವ ಎಲ್ಲಾ ಸಾಕ್ಷ್ಯವನ್ನು, ಅದರಲ್ಲೂ ವಿಶೇಷವಾಗಿ, ಇತರ ವಿಷಯಗಳ ಜೊತೆಗೆ ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆಗಳನ್ನು ಸೂಕ್ಷ್ಮವಾಗಿ ಎಚ್ಚರಿಕೆಯಿಂದ ಪರಿಶೀಲಿಸಿದ್ದೇವೆ. ಪ್ರಸ್ತುತ ವಿಷಯದಲ್ಲಿ, ಎದುರುದಾರರು 2 ಮತ್ತು 3ನೇ ಆರೋಪಿಗಳನ್ನು ಹೊರತುಪಡಿಸಿ 1ನೇ ಆರೋಪಿಯೊಬ್ಬನೇ ಅಪರಾಧವನ್ನು ಮಾಡಿದ್ದಾನೆಂಬ ನಿರ್ದಿಷ್ಟ ಹೇಳಿಕೆ/ವಾದವನ್ನು ಮಂಡಿಸಿದ್ದಾರೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, 2 ಮತ್ತು 3ನೇ ಸಂಖ್ಯೆಯ ಆರೋಪಿಗಳು ಮುಗ್ಧರು ಮತ್ತು ಅಪರಾಧ ನಡೆದ ಸ್ಥಳದಲ್ಲಿ ಅವರಾರೂ ಇರಲೇ ಇಲ್ಲವೆಂಬುದಾಗಿದೆ. ಎದುರುದಾರರು ಹೇಳುವಂತೆ ಘಟನೆ ಇದ್ದಕ್ಕಿಂದ್ದಂತೆ ಸಂಭವಿಸಿರುವುವಂತಹದ್ದಾಗಿದೆ, ಎಂದರೆ, ಮೃತರೀರ್ವರೂ 1ನೇ ಆರೋಪಿಯು ಮದುವೆಯಾಗುವ ಹುಡುಗಿಯ ಬಗ್ಗೆ ಮೊದಲರಾತ್ರಿ ಆಕೆಯುನ್ನು ಗೋಪಾಲರೆಡ್ಡಿಯೊಂದಿಗೆ ಮಲಗಲು

ಕಳುಹಿಸಬೇಕೆಂದು ಛೇಡಿಸುವ ಮೂಲಕ 1ನೇ ಆರೋಪಿಯನ್ನು ರೇಗಿಸಿದಾಗ, ಕೂಡಲೇ ಉದ್ರೇಕಿತನಾದ ಸುಮಾರು 25 ವರ್ಷ ವಯಸ್ಸಿನ ತರುಣನಾದ 1ನೇ ಆರೋಪಿಯು ಮೃತರ ಕೈಯಿಂದ ಕುಡುಗೋಲನ್ನು ಕಿತ್ತುಕೊಂಡು, ತಡೆದುಕೊಳ್ಳಲಾಗದ ಹಾಗೂ ತಕ್ಷಣದ ಭಾವೋದ್ರೇಕದಲ್ಲಿ ಕೋಪೋದ್ರಿಕ್ತನಾಗಿ ಯಾವುದೇ ದಯೆಯೂ ಇಲ್ಲದೆ ಅವರ ಮೇಲೆ ಹಲ್ಲೆ ಮಾಡಿದ್ದಾನೆ ಎಂಬುದು ಎದುರುದಾರರ ಕಡೆಯ ವಾದವಾಗಿದೆ.

7. ನಿ.ಪಿ.1 ದೂರನ್ನು ಸಲ್ಲಿಸಿದವರು ಮೃತರ ಸಹೋದರನೇ ಹೊರತು ಬೇರೆ ಯಾರೂ ಅಲ್ಲ. ದೂರಿನ ಪ್ರಕಾರ ಆತ (ಪಿ.ಡಬ್ಲ್ಯೂ–1) ಘಟನೆಯನ್ನು ನೋಡಿದ್ದಾನೆ; ಆತ ಘಟನೆ ಸ್ಥಳದಿಂದ ಸುಮಾರು 25ರಿಂದ 30 ಅಡಿ ದೂರದಲ್ಲಿ ನಿಂತು ಯಾವುದೇ ರೀತಿಯಲ್ಲೂ ಮಧ್ಯೆಪ್ರವೇಶಿಸದೆ ಘಟನೆಯನ್ನು ನಿರಾತಂಕವಾಗಿ ನೋಡಿರುತ್ತಾನೆ, ಆ ಸಮಯದಲ್ಲಿ ಆತನೊಂದಿಗೆ ಪಿ.ಡಬ್ಲ್ಯೂ–2, 3 ಮತ್ತು 4 ಕೂಡ ಇದ್ದರು; ಆ ಸಾಕ್ಷಿದಾರರೂ ಕೂಡ ಮೃತರನ್ನು ರಕ್ಷಿಸಲು ಪ್ರಯತ್ನಿಸಿಲ್ಲ; ಘಟನೆ ನಡೆದ ನಂತರ ಅವರೆಲ್ಲರೂ ಸ್ಥಳಕ್ಕೆ ಓಡಿಹೋಗಿ, ಹಲವಾರು ತೀವ್ರ ಗಾಯಗಳಿಂದ ನರಳುತ್ತಿದ್ದ ಇಬ್ಬರೂ ಗಾಯಾಳುಗಳನ್ನು ನೋಡಿದ್ದಾರೆ ಮತ್ತು ಆ ನಂತರ ಗಾಯಾಳುಗಳನ್ನು ಕೂಡಲೇ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ, ಅಲ್ಲಿ ಅವರು ಮೃತರಾಗಿದ್ದಾರೆಂದು ಘೋಷಿಸಲಾಗಿದೆ. ಆಶ್ಚರ್ಯವೆಂದರೆ, ಘಟನೆ ನಡೆದ ಸ್ಥಳ ಮತ್ತು ಸೇಂಟ್‌ಜಾನ್ಸ್ ಆಸ್ಪತ್ರೆಯ ನಡುವೆ ಮಾರ್ಗ ಮಧ್ಯದಲ್ಲಿ ಎರಡು ಪೋಲೀಸ್ ಠಾಣೆಗಳಿದ್ದರೂ ಪಿ.ಡಬ್ಲ್ಯೂ–1 ಆಗಲಿ ಅಥವಾ ಯಾರೇ ಇತರ ಪ್ರತ್ಯಕ್ಷ ಸಾಕ್ಷಿಗಳಾಗಲಿ ಬೆಳಗ್ಗೆ 10.00 ಗಂಟೆಯವರೆಗೆ ದೂರನ್ನು ಸಲ್ಲಿಸಿಲ್ಲ. ಕುತೂಹಲಕಾರಿ ಅಂಶವೆಂದರೆ, ನಾರಾಯಣ ಹೃದಯಾಲಯ ಮತ್ತು ಸೇಂಟ್‌ಜಾನ್ಸ್ ಆಸ್ಪತ್ರೆಯ ಪ್ರಾಧಿಕಾರಿಗಳೂ ಕೂಡ ಪೋಲೀಸ್‌ಗೆ ವೈದ್ಯಕೀಯ ಕಾನೂನು ಮೊಕದ್ದಮೆಯ ಬಗ್ಗೆ ಮಾಹಿತಿ ನೀಡಲಿಲ್ಲ; ಮೃತರ ಸಹೋದರರ್ಯಾರೂ ಎಂದರೆ, ಪಿ.ಡಬ್ಲ್ಯೂ–1ರಿಂದ 3ರವರೆಗೆ ಯಾರೂ, ಅವರೇ ಹೇಳಿದಂತೆ ಸಹಾಯ ಕೋರಿ ದೂರವಾಣಿ ಮೂಲಕ ಪಿ.ಡಬ್ಲ್ಯೂ–5 ಅನ್ನು ಕರೆದರೂ ಸಹ, ದೂರವಾಣಿ ಮೂಲಕ ಪೋಲೀಸರನ್ನು ಕರೆಯಲು ಮಾತ್ರ ಪ್ರಯತ್ನಿಸಲಿಲ್ಲ; ಪಿ.ಡಬ್ಲ್ಯೂ–1ರಿಂದ

4 ಬೆಂಗಳೂರಿನಲ್ಲಿ ದೂರನ್ನು ದಾಖಲಿಸಬಹುದಾಗಿತ್ತು, ಅವರೂ ಅದನ್ನು ಮಾಡಲಿಲ್ಲ; ಪಿ.ಡಬ್ಲ್ಯೂ–1 ವಾಪಸ್ ತನ್ನ ಹಳ್ಳಿಗೆ ಹೋಗಿ, ದೂರನ್ನು ಬರೆದು, ಆನಂತರ ಪೊಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿದ್ದಾರೆ. ರಾಮಸಾಗರ ಗ್ರಾಮವು ಮೃತರು ಮತ್ತು ಪಿ.ಡಬ್ಲ್ಯೂ–1 ರಿಂದ 3ರ ಸ್ವಂತ ಊರಾಗಿರುತ್ತದೆ. ಪೊಲೀಸ್ ಠಾಣೆಯು ಹೆಬ್ಬಗೋಡಿಯಲ್ಲಿದೆ. ರಾಮಸಾಗರ ಮತ್ತು ಹೆಬ್ಬಗೋಡಿಯ ನಡುವಿನ ದೂರ ಸುಮಾರು 3 ಕಿಲೋಮೀಟರ್ ಇದೆ. ಪಿ.ಡಬ್ಲ್ಯೂ–1 ವಾಪಸ್ ತನ್ನ ಊರಿಗೆ ಬಂದು ದೂರನ್ನು ಬರೆದು ಆನಂತರ ಪೊಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿದ್ದು ಯಾಕೆ ಎಂಬ ಬಗ್ಗೆ ಯಾವ ಕಾರಣವೂ ಇಲ್ಲ. ಆತ ನೇರವಾಗಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಬಹುದಿತ್ತು. ಕುತೂಹಲಕಾರಿ ಅಂಶವೆಂದರೆ, ಪಿ.ಡಬ್ಲ್ಯೂ–1 ಹೆಬ್ಬಗೋಡಿಯಲ್ಲಿ ದೂರು ದಾಖಲಿಸಿ ಪೊಲೀಸರಿಗೆ ಮಾಹಿತಿ ನೀಡುವವರೆಗೆ ಮೃತರ ಸಹೋದರರಾದ ಪಿ.ಡಬ್ಲ್ಯೂ–2 ಮತ್ತು 3 ಮತ್ತು ಮೃತರ ಆತ್ಮೀಯ ಸ್ನೇಹಿತನಾದ ಪಿ.ಡಬ್ಲ್ಯೂ–4 ಇತರರೂ ಕೂಡ ಪೊಲೀಸರಿಗೆ ಮಾಹಿತಿ ನೀಡಲು ಪ್ರಯತ್ನಿಸಲಿಲ್ಲ. ಇವರೆಲ್ಲರೂ, ಶವಪರೀಕ್ಷೆ ಪಂಚನಾಮೆಯ ನಂತರ ಪೋಲೀಸರು ಅವರ ಹೇಳಿಕೆಗಳನ್ನು ದಾಖಲಿಸಿಕೊಳ್ಳುವವರೆಗೆ ತುಟಿಬಿಚ್ಚದೆ ಸುಮ್ಮನಿದ್ದರು. ಮೇಲೆ ತಿಳಿಸಿದ ಸಂಗತಿಗಳು ಮತ್ತು ಸನ್ನಿವೇಶಗಳು, ದೂರನ್ನು ದಾಖಲಿಸದಂತೆ ಕಂಡರೂ ಕೂಡ ಅದನ್ನು ತಕ್ಷಣವೇ ಮಾಡಿಲ್ಲ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಮೇಲೆ ತಿಳಿಸಿದಂತೆ, ಆ ದೂರು ಅಲ್ಲಿನ ನ್ಯಾಯಿಕ ವ್ಯಾಪ್ತಿಯ ಮ್ಯಾಜಿಸ್ಟ್ರೇಟರಿಗೆ ತಲುಪಿದ್ದು, ಅದೇ ದಿನ ಮಧ್ಯಾಹ್ನ 2.00 ಗಂಟೆಗೆ. ಹಾಗಾಗಿ, ಪಿ.ಡಬ್ಲ್ಯೂ–1 ಯೋಚಿಸಿ, ಚರ್ಚಿಸಿ, ಸಮಾಲೋಚಿಸಿ, ದೂರನ್ನು ದಾಖಲಿಸಲು ಸಾಕಷ್ಟು ಸಮಯವನ್ನು ತೆಗೆದುಕೊಂಡಿದ್ದಾನೆ.

8. ನಿ.ಪಿ.1 ದೂರು, ಘಟನೆಯ ಹಿಂದಿನ ಉದ್ದೇಶದ ಬಗ್ಗೆ ಮಾತ್ರ ಎಂದರೆ, ಘಟನೆಯ ಭಾಗಶಃ ವಿಷಯವನ್ನು ಮಾತ್ರ ಹೇಳುತ್ತದೆ. 1ನೇ ಆರೋಪಿ ಕೇಶವ ಮೃತ ಗೋಪಾಲರೆಡ್ಡಿಯನ್ನು ಕುಡುಗೋಲಿನಿಂದ ಕೊಚ್ಚಿದ್ದಾನೆ; 2ನೇ ಆರೋಪಿ ಹನುಮಂತಪ್ಪ ಮೃತ ಸೋಮಶೇಖರ ರೆಡ್ಡಿಯನ್ನು ಹರಿತವಾದ ಆಯುಧದಿಂದ ಇರಿದಿದ್ದಾನೆ ಎಂದು ದೂರಿನಲ್ಲಿ ಹೇಳಲಾಗಿದೆ. ಆ ಸಮಯದಲ್ಲಿ 3ನೇ ಆರೋಪಿ

ಗೋವಿಂದಪ್ಪ ಮೃತ ಗೋಪಾಲರೆಡ್ಡಿಯ ಕೈಗಳನ್ನು ಹಿಂದಿನಿಂದ ಬಿಗಿಯಾಗಿ ಹಿಡಿದುಕೊಂಡಿದ್ದ. ಇವೆಲ್ಲವೂ ದೂರಿನಲ್ಲಿ ಹೇಳಿರುವ ಹೇಳಿಕೆಗಳು ಮಾತ್ರವೇ ಆಗಿವೆ. ಯಾವುವೇ ಅತಿಜಾಣ್ಮೆಗಳು ಸೂಚಿತವಾಗುವುದಿಲ್ಲ. 3ನೇ ಆರೋಪಿ ಗೋವಿಂದಪ್ಪ ಗೋಪಾಲರೆಡ್ಡಿಯ ಕೈಗಳನ್ನು ಹಿಂದಿನಿಂದ ಹಿಡಿದುಕೊಂಡಿದ್ದ ಎಂಬುದನ್ನು ಹೊರತುಪಡಿಸಿ, ಆತನ ವಿರುದ್ಧ ದೂರುದಾರ/ಮೃತನ ಕಿರಿಯ ಸಹೋದರ ದೂರಿನಲ್ಲಿ ಏನನ್ನು ಅತಿರಂಜಿತವಾಗಿ ಹೇಳಿಲ್ಲ. 3ನೇ ಆರೋಪಿ ಯಾರ ಮೇಲಾದರೂ ಹಲ್ಲೆ ಮಾಡಿದ ಎಂಬ ಬಗ್ಗೆಯೂ ಆತನು ಆಪಾದಿಸಿಲ್ಲ. ತನ್ನ ಮನಸ್ಸಿನಲ್ಲಿ ಭಯವಿದ್ದುದರಿಂದ ತಾನು ಘಟನೆಯನ್ನು ದೂರದಿಂದಲೇ ವೀಕ್ಷಿಸಿದನೆಂದು ದೂರುದಾರನು ಮುಂದುವರಿದು ಹೇಳಿದ್ದಾನೆ. ಅಲ್ಲದೆ, ದೂರಿನಲ್ಲಿ, ದೂರುದಾರನು ಮುಂದುವರಿದು ಹೇಳಿದ್ಧಾನೆ. ಅಲ್ಲದೆ, ದೂರಿನಲ್ಲಿ, ದೂರುದಾರನು ಕೂಗಾಟ, ಕಿರುಚಾಟ ಮಾಡಿದ ನಂತರವೇ ಪಿ.ಡಬ್ಲ್ಯೂ–2, 3 ಮತ್ತು ಇನ್ನೊಬ್ಬ ವ್ಯಕ್ತಿಯು ಎಂದರೆ ಬಲರಾಮ್ ಸ್ಥಳಕ್ಕೆ ಬಂದರು ಎಂದು ತಿಳಿಸಲಾಗಿದೆ. ಅವರನ್ನು ನೋಡಿದ ನಂತರ ಆರೋಪಿಗಳು ಸ್ಥಳದಿಂದ ಓಡಿಹೋದರು. ದೂರನ್ನು ಸಹಜವಾಗಿ ಓದಿದರೆ, ಪಿ.ಡಬ್ಲ್ಯೂ–1ರಿಂದ 4ರ ಪೈಕಿ ಯಾರೂ ಘಟನೆಯ ಪ್ರತ್ಯಕ್ಷ ಸಾಕ್ಷಿಗಳಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅವರೆಲ್ಲರೂ ಘಟನೆಯ ನಂತರವೇ ಬಂದಿದ್ದಾರೆ. ಆಶ್ಚರ್ಯವೆಂದರೆ, ಘಟನೆಯ ಸಮಯದಲ್ಲಿ ಆ ಸ್ಥಳದಲ್ಲಿ ಪಿ.ಡಬ್ಲ್ಯೂ–4 ಇರುವಿಕೆಯ ಬಗ್ಗೆ ದೂರು ಹೇಳುವುದಿಲ್ಲ ಎಂಬುದನ್ನು ಗಮನಿಸುವುದು ಇಲ್ಲಿ ಸೂಕ್ತವೆನಿಸುತ್ತದೆ.

9. ಮೇಲೆ ತಿಳಿಸಿದಂತೆ ದೂರನ್ನು ಮೃತರ ಕಿರಿಯ ಸಹೋದರನು ಆಪಾದಿಸಲಾದ ಪ್ರಶ್ನಿತ ಘಟನೆಯ ಸುಮಾರು 3 ಗಂಟೆಗಳ ನಂತರ ದಾಖಲಿಸಿರುತ್ತಾನೆ. ಆತನು ಘಟನೆಯನ್ನು ನೋಡಿರುತ್ತಾನೆ; ಆಸ್ಪತ್ರೆಗೆ ಹೋಗುವಾಗ ಮೃತರ ಜೊತೆಯಲ್ಲಿರುತ್ತಾನೆ ಮತ್ತು ಆ ನಂತರ ವಾಪಸ್ ಊರಿಗೆ ಬಂದು ಲಿಖಿತ ದೂರನ್ನು ನೀಡಿರುತ್ತಾನೆ. ಆತನು ತನ್ನ ದೂರಿನಲ್ಲಿ ಯಾವುದೇ ಮುಖ್ಯ ವಿವರಗಳನ್ನು ತಪ್ಪಿಸಿರಬಾರದು. ಮುಂದೆ ದೂರುದಾರನ ಹೆಚ್ಚಿನ ಹೇಳಿಕೆಯನ್ನೂ ಕೂಡ ದಾಖಲಿಸಿಕೊಂಡಿರುವುದಿಲ್ಲ. ಹಾಗಾಗಿ, ದೂರುದಾರನ ಹೇಳಿಕೆಯು ದೂರಿನಲ್ಲಿ ಏನಿದೆಯೋ ಅದಷ್ಟೇ ಆಗಿದೆ.

ಮೊದಲನೆಯದಾಗಿ, ದೂರು ಪಿ.ಡಬ್ಲ್ಯೂ–4ರ ಇರುವಿಕೆಯನ್ನು ಮತ್ತು ಹಲ್ಲೆ ಮತ್ತು ಇರಿತದ ಘಟನೆಯಲ್ಲಿ 3ನೇ ಆರೋಪಿಯು ಭಾಗವಹಿಸಿರುವುದನ್ನು ಹೊರತುಪಡಿಸುತ್ತದೆ. ಎರಡನೆಯದಾಗಿ, ದೂರುದಾರನು ನಿರ್ದಿಷ್ಟವಾಗಿ ತನ್ನ ದೂರಿನಲ್ಲಿ ಪಿ.ಡಬ್ಲ್ಯೂ–2 ಮತ್ತು 3 ಘಟನೆ ನಡೆದ ನಂತರ ಅದರಲ್ಲೂ ಪಿ.ಡಬ್ಲ್ಯೂ–1 ಕೂಗಿಕೊಂಡ ನಂತರ ಸ್ಥಳಕ್ಕೆ ಬಂದರು ಎಂದು ತಿಳಿಸಿದ್ದಾನೆ.

ಆಶ್ಚರ್ಯವೆಂದರೆ, ಪಿ.ಡಬ್ಲ್ಯೂ–1 ತಾನು ಘಟನೆಯನ್ನು ದೂರದಿಂದ ನೋಡಿದೆನೆಂದು ಸಾಕ್ಷ್ಯ ಹೇಳಿದ್ದಾನೆ. ಪಿ.ಡಬ್ಲ್ಯೂ–1ರ ಹಾಗೂ ಪಿ.ಡಬ್ಲ್ಯೂ–2ರಿಂದ 4ರ ವರ್ತನೆಯು (ಅವರು ನಿಜವಾಗಿಯೂ ಪ್ರತ್ಯಕ್ಷ ಸಾಕ್ಷಿಗಳಾಗಿದ್ದರೆ) ಅತ್ಯಂತ ಅಸಹಜವಾದುದಾಗಿ ನಮಗೆ ಕಂಡುಬರುತ್ತದೆ. ಸ್ವಂತ ಸಹೋದರರು ಘಟನೆಯನ್ನು ನಿರಾತಂಕವಾಗಿ ದೂರದಲ್ಲಿ ನಿಂತು ನೋಡುತ್ತಾರೆಂಬಷ್ಟು ಮಟ್ಟಿಗೆ ನಿರೀಕ್ಷಿಸಲಾಗದು. ಅವರು ಮಧ್ಯಪ್ರವೇಶಿಸಿ ಮೃತರ ಜೀವಗಳನ್ನು ಉಳಿಸಬೇಕಾಗಿತ್ತು. ಕೊನೇಪಕ್ಷ ತಾವು ದೂರದಲ್ಲಿಯೇ ಇದ್ದುಕೊಂಡು ವಿರೋಧಿಗಳ ವಿರುದ್ಧ ಕಲ್ಲುಗಳನ್ನಾದರೂ ಎಸೆಯಬೇಕಾಗಿತ್ತು. ಕನಿಷ್ಟಪಕ್ಷ ಅವರು ಕೂಗಿ ಕಿರುಚಿ ಹುಯಿಲೆಬ್ಬಿಸಬೇಕಾಗಿತ್ತು. ಘಟನೆಯು ಮೃತರ ಇಟ್ಟಿಗೆ ಕಾರ್ಖಾನೆ ಇರುವ ಆವರಣದಲ್ಲಿಯೇ ನಡೆದಿದೆ. ಒಪ್ಪಿಕೊಳ್ಳಲಾದಂತೆ, ಇಟ್ಟಿಗೆ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕೆಲಸಗಾರರು ಅಲ್ಲಿದ್ದು, ಇಟ್ಟಿಗೆ ಕಾರ್ಖಾನೆಯಲ್ಲಿಯೇ ಮಲಗಿದ್ದರು. ಪಿ.ಡಬ್ಲ್ಯೂ–1ರಿಂದ 4 ಘಟನೆಯನ್ನು ನಿಲ್ಲಿಸುವುದಕ್ಕಾಗಿ ಮೃತರು ಮತ್ತು ಪಿ.ಡಬ್ಲ್ಯೂ–1 ರಿಂದ 3ರವರೆಗೆ ಸೇರಿದ ಇಟ್ಟಿಗೆ ಕಾರ್ಖಾನೆಯ ಕೆಲಸಗಾರರ ನೆರವನ್ನು ಪಡೆದುಕೊಳ್ಳಬೇಕಾಗಿತ್ತು. ದಾಖಲೆಯಲ್ಲಿರುವ ಮೇಲೆ ಹೇಳಿದ ಮುಖ್ಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ನಮಗೆ ಈ ಎಲ್ಲಾ ಪ್ರತ್ಯಕ್ಷ ಸಾಕ್ಷಿದಾರರ ಇರುವಿಕೆಯು ಸಂದೇಹಾಸ್ಪದವಾಗಿದೆಯೆಂದು ಕಂಡುಬರುತ್ತದೆ.

10. ಪಿ.ಡಬ್ಲ್ಯೂ–4 ತನ್ನ ಸಾಕ್ಷ್ಯದಲ್ಲಿ, ತಾನು ಮೃತರಿಂದ ತನ್ನ ಕೆಲಸವನ್ನು ಮಾಡಿಸಿಕೊಳ್ಳುವುದಕ್ಕಾಗಿ ಘಟನಾ ಸ್ಥಳಕ್ಕೆ ಬಂದು ಆ ಘಟನೆಯನ್ನು ತಾನು ನೋಡಿದೆನೆಂದು ಹೇಳಿದ್ದಾನೆಂಬುದನ್ನು ಗಮನಿಸುವುದು ಇಲ್ಲಿ ಸೂಕ್ತವಾಗಿದೆ.

ಆತನು ಪಿ.ಡಬ್ಲ್ಯೂ–1ರಿಂದ 3ರವರೆಗಿನ ವ್ಯಕ್ತಿಗಳೊಂದಿಗೆ ಜೀಪಿನಲ್ಲಿ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದನು. ಆತನ ಮುಖ್ಯ ವಿಚಾರಣೆಯಲ್ಲಿ, ಘಟನೆ ನಡೆದ ಸಮಯದಲ್ಲಿ ಅಪರಾಧ ನಡೆದ ಸ್ಥಳದಲ್ಲಿ ಪಿ.ಡಬ್ಲ್ಯೂ–1ರಿಂದ 3 ಕೂಡಾ ಹಾಜರಿದ್ದರು ಎಂಬುದನ್ನೂ ಒಂದಿಷ್ಟು ಉಸುರಲಿಲ್ಲ. ಆತನ ಮುಖ್ಯ ವಿಚಾರಣೆಯಲ್ಲಿಯೇ ಆತನು ಸಂಪೂರ್ಣವಾಗಿ ಅಪರಾಧ ಸ್ಥಳದಲ್ಲಿ ಪಿ.ಡಬ್ಲ್ಯೂ–1ರಿಂದ 3 ಇರುವುದನ್ನು ಹೊರತುಪಡಿಸಿದ್ದಾನೆ.

11. ಘಟನೆ ತುಂಬಾ ಮೊದಲೇ ನಡೆದಿದೆ ಮತ್ತು ಸಾವೂ ಕೂಡ ತುಂಬಾ ಮೊದಲೇ ಸಂಭವಿಸಿದೆಯೆಂಬುದು ಎದುರುದಾರರ ನಿರ್ದಿಷ್ಟ ವಾದವಾಗಿದೆ. ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರು (ಪಿ.ಡಬ್ಲ್ಯೂ–14) ಸರಿಸುಮಾರು ಮರಣದ ಸಮಯವನ್ನು ನಿರ್ದಿಷ್ಟಪಡಿಸಿಲ್ಲ. ಮೃತದೇಹಗಳು ಶವಾಗಾರದ ಶೈತ್ಯಾಗಾರದಲ್ಲಿದ್ದುದರಿಂದ ಮರಣದ ಸಮಯವನ್ನು ಹೇಳಲಾಗುವುದಿಲ್ಲವೆಂದು ಅವರು ಸಾಕ್ಷ್ಯ ನುಡಿದಿದ್ದಾರೆ.

12. ಪ್ರಾಸಿಕ್ಯೂಷನ್ ಮೊಕದ್ದಮೆಗೆ ಪಿ.ಡಬ್ಲ್ಯೂ–5 ಅನ್ನು ಸೇರ್ಪಡೆ ಮಾಡಿದೆ. ಮೇಲೆ ತಿಳಿಸಿದಂತೆ ಈತನು ಮೃತನ ಸಂಬಂಧೀ ಹಾಗೂ ಕುಟುಂಬ ವೈದ್ಯರಾಗಿರುತ್ತಾರೆ. ಅವರಿಗೆ ಪಿ.ಡಬ್ಲ್ಯೂ–1ರಿಂದ ದೂರವಾಣಿ ಮೂಲಕ ಘಟನೆಯ ಬಗ್ಗೆ ಮತ್ತು ಮೃತನ ಮೇಲೆ ಹಲ್ಲೆ ಮಾಡಿದವರೆಲ್ಲರ ಬಗ್ಗೆ ಮಾಹಿತಿ ದೊರೆಯಿತು. ಪಿ.ಡಬ್ಲ್ಯೂ–1ರ ಕೋರಿಕೆಯ ಮೇರೆಗೆ ಪಿ.ಡಬ್ಲ್ಯೂ–5, ಪಿ.ಡಬ್ಲ್ಯೂ–1ರಿಂದ 4ರವರೆಗಿನ ವ್ಯಕ್ತಿಗಳನ್ನು ಸೇರಿಕೊಂಡು, ಸೇಂಟ್‌ಜಾನ್ಸ್ ಆಸ್ಪತ್ರೆಗೆ ತಮ್ಮ ಸ್ಕೂಟರ್‌ನಲ್ಲಿ ಅವರನ್ನು ಹಿಂಬಾಲಿಸಿಕೊಂಡು ಹೋದನು. ಪಿ.ಡಬ್ಲ್ಯೂ–5ರ ಪ್ರಕಾರ, ಅವರು ಸೋಮಶೇಖರ ರೆಡ್ಡಿಯೊಂದಿಗೆ ಮಾತನಾಡಿದ್ದು, ಆತನು ಕ್ಷೀಣವಾದ ಧ್ವನಿಯಲ್ಲಿ ಎಲ್ಲಾ ಮೂವರು ಆರೋಪಿಗಳು ತನ್ನ ಮೇಲೆ ಹಲ್ಲೆ ಮಾಡಿದರೆಂದು ಅವರಿಗೆ ಹೇಳಿದ್ದಾನೆ. ಗೋಪಾಲ ರೆಡ್ಡಿಯು ಮಾತನಾಡುವ ಸ್ಥಿತಿಯಲ್ಲಿರಲಿಲ್ಲವೆಂದೂ ಕೂಡ ಅವರು ನಿರ್ದಿಷ್ಟವಾಗಿ ಸಾಕ್ಷ್ಯ ನುಡಿದಿದ್ದಾರೆ. ಆದರೆ, ಸೇಂಟ್‌ಜಾನ್ಸ್ ಆಸ್ಪತ್ರೆಯ ವೈದ್ಯರ ಇಬ್ಬರೂ 'ಮೃತರಾಗಿದ್ದಾರೆಂದು' ಘೋಷಿಸಿದ್ದರು. ಸೋಮಶೇಖರ ರೆಡ್ಡಿ

ನೀಡಿದನೆಂದು ಹೇಳಲಾದ ಮರಣಕಾಲದ ಹೇಳಿಕೆಯ ಬಗ್ಗೆ ಪಿ.ಡಬ್ಲ್ಯೂ–5ರ ಸಾಕ್ಷ್ಯವನ್ನು ಪರಿಶೀಲಿಸಲಾಯಿತು. ಪಿ.ಡಬ್ಲ್ಯೂ–5ರ ಸಾಕ್ಷ್ಯವು ಅತ್ಯಂತ ಸಂದೇಹಾಸ್ಪದಾದುದಾಗಿದೆಯೆಂದು ನಮಗೆ ಕಂಡುಬರುತ್ತದೆ. ಆತನು ಈಗಾಗಲೇ ಘಟನೆಯ ಬಗ್ಗೆ ಪಿ.ಡಬ್ಲ್ಯೂ–1ರಿಂದ ದೂರವಾಣಿ ಮೂಲಕ ತಿಳಿದುಕೊಂಡಿರುವುದರಿಂದ ಮತ್ತೊಮ್ಮೆ ಘಟನೆಯ ಬಗ್ಗೆ ತಿಳಿದುಕೊಳ್ಳಲು ಸೋಮಶೇಖರ ರೆಡ್ಡಿಯೊಂದಿಗೆ, ಅದರಲ್ಲೂ ವಿಶೇಷವಾಗಿ ಸೋಮಶೇಖರ ರೆಡ್ಡಿಯು ಕ್ಷೀಣ ಧ್ವನಿಯಲ್ಲಿದ್ದಾಗ ಮತ್ತು ಆ ಸಮಯದಲ್ಲಿ ಗೋಪಾಲ ರೆಡ್ಡಿಗೆ ಮಾತೇ ಇಲ್ಲದಿದ್ದಾಗ ಇವರು ಆ ಬಗ್ಗೆ ಮಾತನಾಡಬೇಕಾಗಿರಲಿಲ್ಲ. ಅದಕ್ಕಿಂತ ಹೆಚ್ಚಾಗಿ, ಮೌಖಿಕ ಮರಣಕಾಲದ ಹೇಳಿಕೆಗೆ ಸಂಬಂಧಿಸಿದ ಸಾಕ್ಷ್ಯವು ಅತ್ಯಂತ ದುರ್ಬಲ ಸಾಕ್ಷಿಯಾಗಿದೆ. ದಾಖಲೆಯಲ್ಲಿರುವ ಇತರ ಸಾಕ್ಷ್ಯವು ನಂಬಿಕಾರ್ಹವಾಗಿದ್ದರೆ, ಆಗ, ಮೌಖಿಕ ಮರಣಕಾಲದ ಹೇಳಿಕೆಯು ಪ್ರಾಸಿಕ್ಯೂಷನ್‌ಗೆ ಉಪಯುಕ್ತವಾಗಬಹುದಿತ್ತು. ಪ್ರಸ್ತುತ ಮೊಕದ್ದಮೆಯಲ್ಲಿ ನಮಗೆ ಪಿ.ಡಬ್ಲ್ಯೂ–1ರಿಂದ 5ರವರೆಗಿನ ವ್ಯಕ್ತಿಗಳಿರುವಿಕೆಯು ಅತ್ಯಂತ ಸಂದೇಹಾಸ್ಪದವೆಂದು ಕಂಡುಬರುತ್ತಿದ್ದು, ತತ್ಪರಿಣಾಮವಾಗಿ ಅವರ ಸಾಕ್ಷ್ಯವು ನಂಬಿಕಾರ್ಹವಲ್ಲದ್ದಾಗಿದೆ. ಆದ್ದರಿಂದ, 2 ಮತ್ತು 3ನೇ ಸಂಖ್ಯೆಯ ಆರೋಪಿಗಳನ್ನು ಖುಲಾಸೆಗೊಳಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯವು ಸಮರ್ಥನೀಯವಾಗಿದೆಯೆಂದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ.

13. ಮೇಲೆ ಸೂಚಿಸಿದಂತೆ, 1ನೇ ಆರೋಪಿಯು ಕೋಪೋದ್ರಿಕ್ತನಾಗಿ ಎಂದರೆ ತಕ್ಷಣದ ಭಾವೋದ್ವೇಗ ಹಾಗೂ ಉದ್ವೇಗಕ್ಕೊಳಗಾಗಿ ಪೂರ್ವಾಲೋಚನೆಯಿಲ್ಲದೆ ಇದ್ದಕ್ಕಿದ್ದಂತೆ ಇಬ್ಬರ ಮೇಲೂ ಹಲ್ಲೆ ಮಾಡಿದನೆಂಬ ನಿರ್ದಿಷ್ಟ ನಿಲುವಿಗೆ ಎದುರುದಾರರು ಬದ್ಧರಾಗಿದ್ದಾರೆ. ಲಿಖಿತ ಹೇಳಿಕೆಯಲ್ಲಿ, ಘಟನೆ ಹೇಗೆ ನಡೆಯಿತು ಮತ್ತು ಮೃತರು ತನ್ನನ್ನು ಹೇಗೆ ರೇಗಿಸಿದರು ಎಂಬ ಬಗ್ಗೆ 1ನೇ ಆರೋಪಿಯು ವಿವರಿಸಿದ್ದಾನೆ. ಆತನು ತನ್ನ ಹೇಳಿಕೆಯಲ್ಲಿ ಮೃತರಿಬ್ಬರ ಮೇಲೆ ಮತ್ತೆಮತ್ತೆ ಬಿಡದಂತೆ ಹಲ್ಲೆ ಮಾಡಿದೆನೆಂದು ನಿರ್ದಿಷ್ಟವಾಗಿ ಒಪ್ಪಿಕೊಂಡಿದ್ದಾನೆ. ಮೃತರ ವಯಸ್ಸು ಸುಮಾರು 47 ಮತ್ತು 49 ಆಗಿದ್ದರೆ, 1ನೇ ಆರೋಪಿಯ ವಯಸ್ಸು ಸುಮಾರು 25 ವರ್ಷಗಳಾಗಿದ್ದು, ಘಟನೆ ನಡೆದ ದಿನಾಂಕದಿಂದ ಇನ್ನೂ ಎಂಟು ದಿನಗಳಲ್ಲಿ ಆತನು ಮದುವೆಯಾಗಬೇಕಾಗಿತ್ತು. 1ನೇ ಆರೋಪಿಯು ಮೃತರಿಗಿಂತಲೂ

ಬಲಶಾಲಿಯಾಗಿದ್ದು, ಅವರ ಮೇಲೆ ಹರಿತವಾದ ಕತ್ತರಿಸುವ ಆಯುಧದಿಂದ ಹಲ್ಲೆ ಮಾಡಿರುವಂತೆ ಕಂಡುಬರುತ್ತದೆ. 1ನೇ ಆರೋಪಿಗೂ ಕೂಡ ಆತನ ಅಂಗೈ ಮತ್ತು ಮಣಿಕಟ್ಟಿನ ಮೇಲೆ ಎರಡು ಕತ್ತರಿಸಿದ ಗಾಯಗಳಾಗಿವೆ. ಅವೆರಡೂ ಸರಳ ಸ್ವರೂಪದವಾಗಿವೆ. ಹಾಗಾಗಿ, ಘಟನೆಯ ಸ್ಥಳದ ಆಮೂಲಾಗ್ರ ದೃಶ್ಯದಲ್ಲಿ 1ನೇ ಆರೋಪಿ ಇರುವುದು ಸಂದೇಹಾಸ್ಪದವಾಗಲಾರದು. ಅಂತೆಯೇ ಅಪರಾಧದಲ್ಲಿ ಆತನ ಭಾಗಿತ್ವವನ್ನು ಕೂಡ ಸಂದೇಹಪಡಲಾಗದು. ಈಗ ಉಳಿದ ಪ್ರಶ್ನೆಯೆಂದರೆ, 1ನೇ ಆರೋಪಿಯು ಎಸಗಿದ ಅಪರಾಧವೇನು?

14. ಮರಣೋತ್ತರ ಪರೀಕ್ಷಾ ವರದಿಗಳು ಹಾಗೂ ಮರಣೋತ್ತರ ಪರೀಕ್ಷೆಯನ್ನು ನಡೆಸಿದ ಪಿ.ಡಬ್ಲ್ಯೂ–14 ವೈದ್ಯರ ಸಾಕ್ಷ್ಯವು, ಮೃತರಿಬ್ಬರಿಗೂ ಉಂಟಾದ ಗಾಯಗಳು ಆಳವಾದ ಇರಿತದ ಗಾಯಗಳಾಗಿವೆಯೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ.

(ಎ) ಗೋಪಾಲ ರೆಡ್ಡಿಗೆ ಆದ ಗಾಯಗಳು ಈ ಮುಂದಿನಂತಿವೆ:–

**ಬಾಹ್ಯ ಗಾಯಗಳು:**

1. ಎದೆಯ ಕೆಳಭಾಗದ ಮುಂಭಾಗದಲ್ಲಿ ಬಹುತೇಕ ಮಧ್ಯಭಾಗದಲ್ಲಿ ಇರುವ ಎದೆಯೆಲುಬಿನ ಅಂಚಿನ 14 ಸೆಂ.ಮೀ. ಕೆಳಗೆ ಎಡಗಡೆಯ ಎದೆತೊಟ್ಟಿನ 8 ಸೆಂ.ಮೀ. ಒಳಭಾಗದಲ್ಲಿ ಎಡಕ್ಕೆ ಮೊಂಡಾಗಿ, ಬಲದ ಕೊನೆಯಲ್ಲಿ ಚೂಪಾಗಿರುವ 4 ಸೆಂ.ಮೀ. x 1.5 ಸೆಂ.ಮೀ x ಎದೆ ಕುಳಿ ಆಳದ ಅಳತೆಯ ಸಮಾನಾಂತರ ಇರಿತದ ಗಾಯ.

2. ಹೊಟ್ಟೆಯ ಕೆಳಭಾಗದ ಮುಂಭಾಗದಲ್ಲಿ ಮಧ್ಯದಲ್ಲಿ ಹೊಕ್ಕಳಿನ 2 ಸೆಂ.ಮೀ. ಕೆಳಗೆ, ಕಿಬ್ಬೊಟ್ಟೆಯ ಕೆಳಗಿನ ವಸ್ತಿಕುಹರದ ಕೂಡುಮೂಳೆಯ 17 ಸೆಂ.ಮೀ. ಮೇಲೆ ಎಡ ಮೇಲ್ಭಾಗದ ಪ್ರವೇಶದ ಕೊನೆಯಲ್ಲಿ ಮೊಂಡಾದ ಬಲ ಕೆಳಭಾಗದ

ನಿರ್ಗಮನದ ಕೊನೆಯಲ್ಲಿ ಚೂಪಾದ, 3 ಸೆಂ.ಮೀ. x 5 ಸೆಂ.ಮೀ. x 5.5. ಸೆಂ.ಮೀ. ಅಳತೆಯ ಓರೆಯಾದ ಇರಿತದ ಗಾಯ.

3. ಬಲತೊಡೆಯು ಮೇಲು ಮುಂಭಾಗದಲ್ಲಿ ಮುಂಭಾಗದ ಮೇಲ್ಭಾಗದ ಟೊಂಕದೆಲುಬಿನ 11 ಸೆಂ.ಮೀ. ಕೆಳಗೆ, ಎಡಗಡೆಯ ಪ್ರವೇಶ ಮೊಂಡಾದ ಬಲಗಡೆಯ ನಿರ್ಗಮನ ಚೂಪಾಗಿರುವ 3 ಸೆಂ.ಮೀ. x 1.5 ಸೆಂ.ಮೀ. x 6 ಸೆಂ.ಮೀ ಅಳತೆಯ ಮಾಂಸಖಂಡದ ಮೇಲ್ಮೈನಲ್ಲಿ ಇರುವ ಅಡ್ಡಡ್ಡ ಇರಿತದ ಗಾಯ.

4. ಹೊಟ್ಟೆಯ ಮೇಲ್ಭಾಗದಲ್ಲಿ ಬಲಗಡೆಗೆ, ಮಧ್ಯಭಾಗದ ಬಲಕ್ಕೆ ಬಲ ಎದೆತೊಟ್ಟಿನ 10 ಸೆಂ.ಮೀ. ಕೆಳಗೆ ಇರುವ 1.5 ಸೆಂ.ಮೀ. x 0.3 ಸೆಂ.ಮೀ. x ಚರ್ಮದಾಳದ ಅಳತೆಯ ಮೇಲ್ಭಾಗದಲ್ಲಿ ಕೊಚ್ಚಿದ ಗಾಯ.

5. ಮಧ್ಯದ ಕೆಳಭಾಗದ ಬಲಗಡೆಗೆ ಮತ್ತು ಟೊಂಕದೆಲುಬಿನ ಮುಂಭಾಗದ ಬಲಮೇಲ್ಭಾಗದಲ್ಲಿ 2 ಸೆಂ.ಮೀ.x 0.3 ಸೆಂ.ಮೀ. x ಚರ್ಮದಾಳದ ಅಳತೆಯ ಮೇಲ್ಭಾಗದಲ್ಲಿ ಕೊಚ್ಚಿದ ಗಾಯ.

6. ಎಡತೊಡೆಯ ಸಂದಿಯ ಸ್ವಲ್ಪ ಮೇಲೆ ಮಧ್ಯಭಾಗದಿಂದ 6 ಸೆಂ.ಮೀ. ಎಡಕ್ಕೆ, ಟೊಂಕದೆಲುಬಿನ ಮುಂದೆ ಮೇಲೆ ಎಡಭಾಗದ 5 ಸೆಂ.ಮೀ. ಒಳಕ್ಕೆ ಇರುವ 1 ಸೆಂ.ಮೀ. x 0.3 ಸೆಂ.ಮೀ. x ಚರ್ಮದಾಳದ ಅಳತೆಯ ಮೇಲ್ಭಾಗದಲ್ಲಿ ಕೊಚ್ಚಿದ ಗಾಯ.

7. ಕೆಳಭಾಗದ ಬೆನ್ನಿನ ಎಡಗಡೆಯ ಮೇಲ್ಭಾಗದಲ್ಲಿ, ನಿತಂಬದ ಮೇಲ್ಭಾಗದ ಟೊಂಕದೆಲುಬಿನ ಎಡಕ್ಕೆ 9 ಸೆಂ.ಮೀ. ಬಿಂದುವಿನಿಂದ ಮಧ್ಯದಿಂದ 1 ಸೆಂ.ಮೀ. ಬಿಂದುವಿನವರೆಗೆ ಹೊರಗಡೆಗೆ ಉದ್ದಕ್ಕೂ ವಿಸ್ತರಿಸಿರುವ 9 ಸೆಂ.ಮೀ. x 0.3 ಸೆಂ.ಮೀ. x ಚರ್ಮದ ಆಳದ ಅಳತೆಯ ಮೇಲ್ಭಾಗದಲ್ಲಿ ಕತ್ತರಿಸಿದ ಗಾಯ.

8. ಹೊಟ್ಟೆಯ ಮುಂಭಾಗದ ಎಡಗಡೆಯಲ್ಲಿ, ಮಧ್ಯದಿಂದ 15 ಸೆಂ.ಮೀ. ಎಡಕ್ಕೆ 13 ಸೆಂ.ಮೀ. ಕೆಳಕ್ಕೆ ಮತ್ತು ಮಧ್ಯದಿಂದ ಎಡ ಎದೆತೊಟ್ಟಿನವರೆಗೆ 1.5 ಸೆಂ.ಮೀ. x 1 ಸೆಂ.ಮೀ. ಅಳತೆಯ ತರಚು ಗಾಯ.

ಹೊರಗಿನ ಗಾಯ ಸಂ.1 ಅನ್ನು ಕೊಯ್ದೆರೆದು ವಿಶ್ಲೇಷಿಸಿದಾಗ, ಆಯುಧವು ಎದೆಗೂಡನ್ನು ಚುಚ್ಚಿದ ನಂತರ ಎದೆಮೂಳೆಯ ದೇಹದ ಕೆಳಭಾಗವನ್ನು ಹಾದು ಮುಂದೆ ಎಡ ಹೃತ್ಕುಹರದ ಮೂಲಕ ಹೃದಯವನ್ನು ಚುಚ್ಚಿದೆ ಮತ್ತು ಎಡ ಶ್ವಾಸಕೋಶದ ಕೆಳಜೋತಾಡುವ ಹಾಲೆಯನ್ನು ಸೀಳಿ ಮುಖ್ಯ ಹೃದಯದಿಂದ ಹಾದು ಹೊರಬಂದಿದೆ. ರಕ್ತ ಮತ್ತು ರಕ್ತದ ಹೆಪ್ಪುಗಟ್ಟಿರುವುದು 950 ಗ್ರಾಂ ತೂಕವಿದೆ. ಎಡಭಾಗದ ಎದೆಗೂಡಿನ ಕುಹರದಲ್ಲಿ ಅದು ಇದೆ. ಗಾಯವು ಹಿಂದಕ್ಕೆ ದಿಕ್ಕುಮಾಡಿದ್ದು ಸ್ವಲ್ಪಮಟ್ಟಿಗೆ ಎಡಗಡೆಗೆ ತಿರುಗಿದೆ.

ಬಾಹ್ಯ ಗಾಯ ಸಂ.2ನ್ನು ಕೊಯ್ದೆರೆದು ವಿಶ್ಲೇಷಿಸಿದಾಗ, ಆಯುಧವು ಮೇಲ್ಭಾಗದ ಉದರ ಗೋಡೆಯ ಮೇಲ್ಭಾಗದ ಮಾಂಸಖಂಡದಲ್ಲಿ ಪ್ರವೇಶಿಸಿದೆ. ಗಾಯವು 5.5 ಸೆಂ.ಮೀ. ಆಳದಿಂದ ಮೇಲೆ ಮತ್ತು ಕೆಳಗೆ ತಿರುಗಿದೆ.

ಬಾಹ್ಯ ಗಾಯ ಸಂ.3ನ್ನು ಕೊಯ್ದ್ತರೆದು ವಿಶ್ಲೇಷಿಸಿದಾಗ, ಆಯುಧವು ಎಡತೊಡೆಯ ಮುಂಭಾಗದಲ್ಲಿ ಸಮತಟ್ಟಾದ ಮಾಂಸಖಂಡದಲ್ಲಿ ಪ್ರವೇಶಿಸಿದೆ. ಗಾಯವು 6 ಸೆಂ.ಮೀ. ಆಳದಲ್ಲಿ ಮೇಲುಗಡೆಗೆ ಮತ್ತು ಕೆಳಗಡೆಗೆ ಹಾದಿದೆ.

<u>**ತಲೆಬುರುಡೆ ಮತ್ತು ಬೆನ್ನೆಲುಗಂಬ ಕಾಲುವೆಯನ್ನು ಕೊಯ್ದೆರೆದು ವಿಶ್ಲೇಷಿಸಿದಾಗ**</u>

ತಲೆಬುರುಡೆ ಮತ್ತು ಬೆನ್ನೆಲುಬು ಅಬಾಧಿತವಾಗಿದೆ, ಮಿದುಳು ಪೊರೆ, ಮಿದುಳು ಮತ್ತು ಬೆನ್ನುಹುರಿ ಅಬಾಧಿತ ಹಾಗು ನಿಸ್ತೇಜವಾಗಿದೆ.

<u>**ಎದೆಗೂಡನ್ನು ಕೊಯ್ದೆರೆದು ವಿಶ್ಲೇಷಿಸಿದಾಗ**</u>

ಎದೆಗೋಡೆಯ ಪಕ್ಕೆ ಲುಬುಗಳನ್ನು ವಿಶ್ಲೇಷಿಸಲಾಗಿದ್ದು, ಅವು ಅಬಾಧಿತವಾಗಿವೆ, ಎದೆಮೂಳೆಯನ್ನು ವಿಶ್ಲೇಷಿಸಿದರೆ, ಕತ್ತರಿಸಿದ ಕ್ಷೇತ್ರದ ಸುತ್ತ ರಕ್ತ ಹರಿಯುವಿಕೆ ಇರುತ್ತದೆ.

**ಶ್ವಾಸಕೋಶ ಪೊರೆ**: ಬಲ ಶ್ವಾಸಕೋಶ ಪೊರೆ ಅಬಾಧಿತವಾಗಿದೆ, ಎಡಶ್ವಾಸಕೋಶ ಪೊರೆ ಗಾಯ ಸಂ.1ಕ್ಕೆ ಸಂವಾದಿಯಾಗಿ ಸೀಳಿರುವುದನ್ನು ತೋರಿಸುತ್ತದೆ.

ಧ್ವನಿನಾಳ ಮತ್ತು ಶ್ವಾಸನಾಳವು ರಕ್ತದ ನೊರೆಯನ್ನು ಒಳಗೊಂಡಿವೆ.

ಶ್ವಾಸಕೋಶಗಳು: ಬಲಶ್ವಾಸಕೋಶ ಅಬಾಧಿತ ವಿವರ್ಣವಾಗಿದೆ. ಎಡಶ್ವಾಸಕೋಶವು ಹಾನಿಗೊಂಡಿದ್ದು, ಕೆಳನೇತಾಡುವ ಎಡಹಾಲೆಯು ಸೀಳಿರುವುದು ಕಂಡುಬರುತ್ತದೆ, ಕುಳಿಯಲ್ಲಿ 950 ಗ್ರಾಂ ರಕ್ತ ಮತ್ತು ರಕ್ತದ ಹೆಪ್ಪುಗಳಿರುವುದು ಕಂಡುಬಂದಿದೆ.

ಹೃದಯಪೊರೆ ಚೀಲವು 500 ಮಿ.ಮೀ. ರಕ್ತವನ್ನು ಒಳಗೊಂಡಿದೆ.

ಹೃದಯ ಗಾಯವನ್ನು ವಿಶ್ಲೇಷಿಸಲಾಗಿದೆ. ಹೃದಯ ಸಂಕುಚಿತಗೊಂಡಿದೆ. ದೊಡ್ಡ ನಾಳಗಳು ಅಬಾಧಿತವಾಗಿವೆ.

ಹೊಟ್ಟೆ ಭಾಗದ ಗೋಡೆಗಳನ್ನು ವಿಶ್ಲೇಷಿಸಲಾಗಿದೆ, ಜಠರದ ಒಳಪೊರೆ ಅಬಾಧಿತ ಮತ್ತು ನಿಸ್ತೇಜವಾಗಿದೆ. ಬಾಯಿಯ ಗಂಟಲ್ಕುಳಿ ಮತ್ತು ಅನ್ನನಾಳ ಅಬಾಧಿತವಾಗಿದೆ. ಜಠರದಲ್ಲಿ 300 ಮಿ.ಲೀ. ಅರೆಜೀರ್ಣವಾದ ಅಕ್ಕಿ ಮತ್ತು ರಾಗಿ ಆಹಾರವಿದ್ದು, ವಾಸನೆಯುಳ್ಳದ್ದಾಗಿದೆ, ಅಸಹಜವಾದ ವಾಸನೆಯೇನಿಲ್ಲ, ಲೋಳೆಪೊರೆ ಸಾಮಾನ್ಯವಾಗಿದೆ, ಚಿಕ್ಕ ಕರುಳು ಮತ್ತು ದೊಡ್ಡ ಕರುಳು ಅಬಾಧಿತ ಮತ್ತು ವಿವರ್ಣವಾಗಿದ್ದು, ಗ್ಯಾಸ್ ಮತ್ತು ಅದರ ಪದಾರ್ಥಗಳು ತುಂಬಿಕೊಂಡಿವೆ. ಪಿತ್ತಜನಕಾಂಗ ಮತ್ತು ಗುಲ್ಮ ಅಬಾಧಿತವಾಗಿವೆ.

ಮೂತ್ರಪಿಂಡಗಳು ಅಬಾಧಿತ ಮತ್ತು ವಿವರ್ಣವಾಗಿವೆ, ಮೂತ್ರಕೋಶ ಅಬಾಧಿತ ಮತ್ತು ಖಾಲಿ ಇದೆ. ಬಾಹ್ಯ ಮತ್ತು ಆಂತರಿಕ ಜನನಾಂಗಗಳು ಅಬಾಧಿತವಾಗಿವೆ.

ಎಲ್ಲಾ ಗಾಯಗಳು ಸಾವು ಸಂಭವಿಸುವುದಕ್ಕಿಂತ ಮುಂಚಿನದಾಗಿದ್ದು ಸ್ವರೂಪದಲ್ಲಿ ಹೊಸ ಗಾಯಗಳಾಗಿವೆ. ತನಿಖಾಧಿಕಾರಿಯ ಕೋರಿಕೆಯಂತೆ ರಕ್ತವನ್ನು ಶೇಖರಿಸಿಟ್ಟುಕೊಂಡು ಸಂಬಂಧಪಟ್ಟ ಪೊಲೀಸರಿಗೆ ಒಪ್ಪಿಸಲಾಗಿದೆ.

**(ಬಿ) ಸೋಮಶೇಖರ ರೆಡ್ಡಿಗೆ ಆದ ಗಾಯಗಳು ಈ ಮುಂದಿನಂತಿವೆ:**

1. ಮೇಲುಹೊಟ್ಟೆಯ ಬಲಭಾಗದಲ್ಲಿ ಮಧ್ಯಭಾಗದಿಂದ ಬಲಕ್ಕೆ 6 ಸೆಂ.ಮೀ. x 38 ಸೆಂ.ಮೀ. ನಲ್ಲಿ ಇರುವ 4 ಸೆಂ.ಮೀ. x 1 ಸೆಂ.ಮೀ. x ಹೊಟ್ಟೆಯ ಪೊಳ್ಳಿನ ಆಳದ ಅಳತೆಯ ಇರಿತದ ಗಾಯ. ಕತ್ತಿನ ಮೂಳೆಯ ಮಧ್ಯದ ಅಂಚಿನುದ್ದಕ್ಕೂ ಬಲ ಕತ್ತಿನ ಮೂಳೆಯ ಮಧ್ಯದ ಕೆಳಗೆ ಸಂಪೂರ್ಣ ಕತ್ತರಿಸಲಾಗಿದೆ. ಎರಡೂ ಅಂಚುಗಳು ಚೂಪಾಗಿದ್ದು ಅಡ್ಡಡ್ಡವಾಗಿದೆ.

2. 3 ಸೆಂ.ಮೀ. x 1.5 ಸೆಂ.ಮೀ. x 3 ಸೆಂ.ಮೀ. ಅಳತೆಯ ಇರಿತದ ಗಾಯ. ಕೆಳಹೊಟ್ಟೆಯ ಬಲಭಾಗಕ್ಕೆ 10 ಸೆಂ.ಮೀ. ಟೊಂಕದೆಲುಬಿನ ಮೇಲ್ಭಾಗದ ಮುಂಭಾಗದಲ್ಲಿ ಮೇಲಕ್ಕೆ 14 ಸೆಂ.ಮೀ. ಮಧ್ಯಭಾಗದ ಬಲಕ್ಕೆ ಅಂಚುಗಳು ಸಂಪೂರ್ಣ ತುಂಡಾಗಿದೆ, ಅದು ಓರೆಯಾಗಿದ್ದು, ಕೆಳಗಿನ ಒಳಕೊನೆಯು ಚೂಪಾಗಿದ್ದು, ಮೇಲಿನ ಹೊರ ಕೊನೆಯು ಮೊಂಡಾಗಿದೆ.

3. ಕೆಳಹೊಟ್ಟೆಯ ಬಲಭಾಗದಲ್ಲಿ 3 ಸೆಂ.ಮೀ. x 1.5 ಸೆಂ.ಮೀ. x ಮಾಂಸದಾಳದ ಅಳತೆಯ ಇರಿತದ ಗಾಯ, ಕೆಳಹೊಟ್ಟೆಯ ಬಲಭಾಗದಲ್ಲಿ, ಬಲ ಟೊಂಕದೆಲುಬಿನ ತುದಿಯ ಮೇಲೆ 3 ಸೆಂ.ಮೀ. ಮತ್ತು ಮಧ್ಯಭಾಗದ ಬಲಗಡೆಗೆ 17.5 ಸೆಂ.ಮೀ., ಓರೆಯಾದ ಗಾಯವಾಗಿದೆ. ಎರಡೂ ತುದಿಗಳು ಚೂಪಾಗಿವೆ, ಅಂಚುಗಳು ಸಂಪೂರ್ಣವಾಗಿ ತುಂಡಾಗಿವೆ.

4. ಬಲತೊಡೆಸಂದಿ ಪ್ರದೇಶದ ಮೇಲೆ ಮಾಂಸಖಂಡದ ಸಮತಲದುದ್ದಕ್ಕೂ 3 ಸೆಂ.ಮೀ. x 1.5 ಸೆಂ.ಮೀ. x 10 ಸೆಂ.ಮೀ. ಅಳತೆಯ ಇರಿತದ ಗಾಯ, ಬಲ ಟೊಂಕದೆಲುಬಿನ ತುದಿಯ ಕೆಳಗೆ 4.5 ಸೆಂ.ಮೀ. ಪೂರ್ಣ ಕಡಿತವಾಗಿದೆ. ಎರಡೂ ತುದಿಗಳು ಚೂಪಾಗಿದ್ದು, ಸ್ವಲ್ಪಮಟ್ಟಿಗೆ ಅಡ್ಡವಾಗಿವೆ.

5. ಎಡ ಹೆಗಲೆಲುಬಿನ ಕೆಳಮೂಲೆಯ 17 ಸೆಂ.ಮೀ. ಕೆಳಗಿರುವ 3 ಸೆಂ.ಮೀ. x 1 ಸೆಂ.ಮೀ. x ಎದೆ ಕುಳಿಯಾಳದ ಅಳತೆಯ ಇರಿತದ ಗಾಯ. ಅಂಚುಗಳು ಸಂಪೂರ್ಣ ತುಂಡಾಗಿದ್ದು, ಎರಡೂ ತುದಿಗಳು ಚೂಪಾಗಿವೆ.

ಗಾಯ ಸಂ.1 ಅನ್ನು ಕೊಯ್ದೆರೆದು ವಿಶ್ಲೇಷಿಸಿದಾಗ, ಆಯುಧವು ಹೊಟ್ಟೆಯ ಚರ್ಮ ಮತ್ತು ಮಾಂಸಖಂಡವನ್ನು ಕತ್ತರಿಸಿ ಆ ನಂತರ ಜಠರದ ಹೊರಪೊರೆಯ

ಕುಳಿಯನ್ನು ಪ್ರವೇಶಿಸಿ, ಕರುಳು ನಡುವಿನ ಪೊರೆಯನ್ನು ತುಂಡರಿಸಿದೆ ಮತ್ತು ಅದರ ತುದಿಗಳು ಪದೇಪದೇ ಅಲ್ಲೆಲ್ಲಾ ಚಲಿಸಿ, ನಂತರ ಟೊಂಕದೆಲುಬಿಗೆ ಪ್ರವೇಶಿಸಿದೆ. ಅದರ ಮಧ್ಯಭಾಗವೂ ಆಮೂಲಾಗ್ರವಾಗಿ ಒಳಹೋಗಿದೆ. ಗಾಯವು ಹಿಂದಿಕ್ಕಿಗೆ ಮತ್ತು ಕೆಳದಿಕ್ಕಿಗೆ 8 ಸೆಂ.ಮೀ. ಆಳದವರೆಗೂ ಹೋಗಿದೆ.

ಗಾಯ ಸಂ.5 ಅನ್ನು ಕೊಯ್ದುತೆರೆದು ವಿಶ್ಲೇಷಿಸಿದಾಗ, ಆಯುಧವು ಎಡಎದೆಯ ಚರ್ಮ ಮತ್ತು ಮಾಂಸಖಂಡಗಳನ್ನು ತುಂಡರಿಸಿದ ನಂತರ, ಹಿಂದಣ ಕಂಕುಳಿನ ಕಡೆಗೆ ಎಡ 10ನೇ ಪಕ್ಕೆಲುಬಿನ ನಡುವೆ ಪ್ರವೇಶಿಸಿದೆ ಮತ್ತು ಆನಂತರ ಜಠರದ ಹೊರಪೊರೆಯ ಕುಳಿಯನ್ನು ಪ್ರವೇಶಿಸಿದ್ದು, ಪದೇಪದೇ ಗುಲ್ಮವನ್ನು ಚುಚ್ಚಿದೆ, ನಂತರ ಗುಲ್ಮದ ತಿರುವನ್ನು ತಾಕಿದೆ. ಗಾಯವು ಹಿಂದಿಕ್ಕಿಗೆ ಸ್ವಲ್ಪಮಟ್ಟಿಗೆ ಕೆಳದಿಕ್ಕಿಗೆ ಸಂಚರಿಸಿದೆ ಮತ್ತು ಎಡಕ್ಕೆ 9 ಸೆಂ.ಮೀ. ಆಳವಾಗಿದೆ.

**ತಲೆಬುರುಡೆ ಮತ್ತು ಬೆನ್ನೆಲುಗಂಬ ಕಾಲುವೆಯನ್ನು ಕೊಯ್ದುತೆರೆದು ವಿಶ್ಲೇಷಿಸಿದಾಗ:**

ತಲೆಬುರುಡೆ ಮತ್ತು ಬೆನ್ನೆಲುಬು ಅಬಾಧಿತವಾಗಿದೆ, ಮಿದುಳುಪೊರೆ, ಮಿದುಳು ಮತ್ತು ಬೆನ್ನುಹುರಿ ಅಬಾಧಿತ ಹಾಗೂ ನಿಸ್ತೇಜವಾಗಿದೆ.

**ಎದೆಗೂಡನ್ನು ಕೊಯ್ದುತೆರೆದು ವಿಶ್ಲೇಷಿಸಿದಾಗ :**

ಎದೆಗೋಡೆಯು ಪಕ್ಕೆಲುಬುಗಳನ್ನು ವಿಶ್ಲೇಷಿಸಲಾಗಿದ್ದು, ಅವು ಅಬಾಧಿತವಾಗಿವೆ; ಶ್ವಾಸಕೋಶ ಪೊರೆ, ಧ್ವನಿನಾಳ ಮತ್ತು ಶ್ವಾಸನಾಳವು ಅಬಾಧಿತ ಮತ್ತು ವಿವರ್ಣವಾಗಿವೆ. ಎರಡೂ ಶ್ವಾಸಕೋಶಗಳು ಉಬ್ಬರಿಸಿವೆ ಮತ್ತು ವಿವರ್ಣವಾಗಿ, ಕಡುವರ್ಣದ ರಕ್ತ ಒಸರಿದೆ, ಹೃದಯ ಪೊರೆ ಚೀಲ ಮತ್ತು ಹೃದಯ ಅಬಾಧಿತವಾಗಿವೆ ಮತ್ತು ವಿವರ್ಣವಾಗಿದ್ದು, ಸ್ವಲ್ಪಮಟ್ಟಿಗೆ ರಕ್ತವನ್ನು ಒಳಗೊಂಡಿದೆ.

**ಹೊಟ್ಟೆಯನ್ನು ಕೊಯ್ದುತೆರೆದು ವಿಶ್ಲೇಷಿಸಿದಾಗ :**

ಹೊಟ್ಟೆಯ ಗೋಡೆಗಳನ್ನು ವಿಶ್ಲೇಷಿಸಿದಾಗ ಬಾಹ್ಯ ಗಾಯಗಳಾಗಿವೆ, ಜಠರದ ಹೊರಪೊರೆಯು ಹೊರಪೊರೆ ಭಾಗದ ಕುಳಿಯು ನಜ್ಜುಗುಜ್ಜಾಗಿರುವುದನ್ನು

ತೋರಿಸುತ್ತದೆ. ಅದರಲ್ಲಿ 2.5 ಲೀಟರ್ ರಕ್ತವನ್ನು ಒಳಗೊಂಡಿದೆ. ಬಾಯಿಯ ಗಂಟಲ್ಕುಳಿ ಮತ್ತು ಅನ್ನನಾಳ ಅಬಾಧಿತ ಹಾಗೂ ವಿವರ್ಣವಾಗಿದೆ. ಜಠರದಲ್ಲಿ 200 ಮಿ.ಮೀ. ಕಂದುಬಣ್ಣದ ದ್ರವವಿದ್ದು, ವಾಸನಾಯುಕ್ತವಾಗಿದೆ. ಎನ್.ಎ.ಡಿ. ಲೋಳೆಪೊರೆಯು ಉತ್ತಮ ಸ್ಥಿತಿಯಲ್ಲಿದೆ. ಚಿಕ್ಕಕರುಳು ಮತ್ತು ದೊಡ್ಡಕರುಳು ಬಾಹ್ಯ ಗಾಯಗಳಿಂದ ಕೂಡಿದ್ದು, ವಿವರ್ಣವಾಗಿವೆ.

ಮೂತ್ರಪಿಂಡ ಅಬಾಧಿತವಾಗಿದೆ.

ಗುಲ್ಮ ಹಾನಿಗೊಂಡಿದೆ ಮತ್ತು ವಿವರ್ಣವಾಗಿದೆ.

ಮೂತ್ರಪಿಂಡಗಳು ಅಬಾಧಿತವಾಗಿವೆ ಮತ್ತು ವಿವರ್ಣವಾಗಿವೆ.

ಮೂತ್ರಕೋಶ ಅಬಾಧಿತ ಹಾಗೂ ಖಾಲಿಯಾಗಿದೆ.

ಬಾಹ್ಯ ಮತ್ತು ಆಂತರಿಕ ಜನನಾಂಗಗಳು ಅಬಾಧಿತ ಹಾಗೂ ಸುಸ್ಥಿತಿಯಲ್ಲಿವೆ.

ಎಲ್ಲಾ ಗಾಯಗಳು ಸಾವು ಸಂಭವಿಸುವುದಕ್ಕಿಂತ ಮುಂಚಿನವಾಗಿದ್ದು, ಸ್ವರೂಪದಲ್ಲಿ ಹೊಸ ಗಾಯಗಳಾಗಿವೆ. ತನಿಖಾಧಿಕಾರಿಯ ಕೋರಿಕೆಯಂತೆ ರಕ್ತವನ್ನು ಶೇಖರಿಸಿಟ್ಟುಕೊಂಡು ಸಂಬಂಧಪಟ್ಟ ಪೊಲೀಸರಿಗೆ ಒಪ್ಪಿಸಲಾಗಿದೆ.

15. ಎರಡೂ ಮೃತದೇಹಗಳ ಮೇಲೆ ಆಗಿರುವ ಹಲವು ಇರಿತ ಗಾಯಗಳ ಕಾರಣದಿಂದಾಗಿ ಆಘಾತ ಹಾಗೂ ಅಧಿಕ ರಕ್ತಸ್ರಾವದಿಂದ ಸಾವು ಸಂಭವಿಸಿದೆಯೆಂದು ವೈದ್ಯರು ಅಭಿಪ್ರಾಯಪಟ್ಟಿದ್ದಾರೆ.

ವೈದ್ಯರ ಸಾಕ್ಷ್ಯದಿಂದ ಮತ್ತು ಮರಣೋತ್ತರ ವರದಿಗಳಿಂದ ಮೃತರೀರ್ವರಿಗೂ ಹಲವಾರು ಇರಿತದ ಗಾಯಗಳಾಗಿದ್ದು, ಅವರ ಸಾವು ಹಲವು ಇರಿತದ ಗಾಯಗಳ ಪರಿಣಾಮವಾಗಿ ಉಂಟಾದ ಆಘಾತ ಹಾಗೂ ಅಧಿಕ ರಕ್ತಸ್ರಾವದಿಂದ

ಸಂಭವಿಸಿದೆಯೆಂಬುದು ಸುಸ್ಪಷ್ಟವಾಗುತ್ತದೆ. ಹಾಗಾಗಿ, 1ನೇ ಆರೋಪಿಯು ಮಾಡಿದ ಇರಿತದ ಗಾಯಗಳ ಕಾರಣದಿಂದಲೇ ಸಾವು ಸಂಭವಿಸಿದೆಯೆಂಬುದು ಸಾಕಷ್ಟು ಮಟ್ಟಿಗೆ ಸ್ಪಷ್ಟವಾಗುತ್ತದೆ.

16. ಪ್ರತಿವಾದಿಯ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದಂತೆ, ಬಿಸಿರಕ್ತದ ಯುವಕನಾಗಿದ್ದ ಮತ್ತು ಈಗಾಗಲೇ ಭಾವೀ ಮದುಮಗಳೊಂದಿಗೆ ನಿಶ್ಚಿತಾರ್ಥ ಕಾರ್ಯಕ್ರಮ ನಡೆದು ದಿನಾಂಕ 6.6.2004ರಂದು ವಿವಾಹ ನಿಶ್ಚಯವಾಗಿದ್ದ 1ನೇ ಆರೋಪಿಗೆ ಮೃತರು ಆಡಿದ ಅವಮಾನದ ಮಾತುಗಳನ್ನು ಸಹಿಸಲಾರದೆ ಅವನು ಸಂಪೂರ್ಣವಾಗಿ ಭಾವೋದ್ರೇಕಗೊಂಡಿದ್ದ ಎಂದು ವಾದಿಸಿರುವುದು ಸರಿಯಾಗಿಯೇ ಇರಬಹುದು. ಎದುರುದಾರರ ಪ್ರಕಾರ, ಈ ಕೆಳಕಂಡ ಮಾತುಗಳನ್ನು ಆಡಲಾಯಿತೆಂದು ಆರೋಪಿಯು ಹೇಳಿದ್ದಾನೆ.

> **‘‘ಏನೋ ನಿನಗೆ ಮದುವೆಯಂತೆ, ನಿನ್ನ ಹೆಂಡತಿಯನ್ನು**
> **ಮೊದಲನೇ ರಾತ್ರಿ ನನ್ನ ಜೊತೆ ಮಲಗಿಸು ನಾನು ಮಲಗುತ್ತೇನೆ.’’**

ಆದರೆ, ಈ ಚುಡಾಯಿಸುವುದು, ರೇಗಿಸುವುದು ಇತ್ಯಾದಿಗಳಿಗೆ ಸಂಬಂಧಿಸಿದ, ಮೇಲೆ ಹೇಳಲಾದ ಸಂಗತಿಗಳ ಬಗ್ಗೆ ಪ್ರಾಸಿಕ್ಯೂಷನ್ ದಾಖಲೆಯಲ್ಲೇನೂ ಕಂಡುಬರುವುದಿಲ್ಲ. ಆರೋಪಿಯು ತೆಗೆದುಕೊಂಡ ಪ್ರತಿರಕ್ಷೆಯನ್ನು ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ ಅಲ್ಲಗಳೆಯಲಾಗುವುದಿಲ್ಲ. (ಮೇಲೆ ಹೇಳಲಾದ) ಹೊಲಸು ಮಾತುಗಳನ್ನು ಮೃತರು ಆಡಿದ್ದರೆಂದು ಹೇಳಲಾಗಿರುವುದರಿಂದ ಆರೋಪಿಯು ಕಾನೂನನ್ನು ತನ್ನ ಕೈಗೆ ತೆಗೆದುಕೊಂಡು ಮೃತರನ್ನು ಇರಿಯಬೇಕಾಯಿತು. ಆದ್ದರಿಂದ, ಅಧಿವಿಚಾರಣಾ ನ್ಯಾಯಾಲಯವು, ತಕ್ಷಣದ ಕೋಪದಿಂದ ಮತ್ತು ಮೃತರು ಉದ್ರೇಕಿಸಿದ್ದರಿಂದ ಹಾಗೂ ಕಡುಕೋಪದ ಭರದಲ್ಲಿ ಘಟನೆ ಸಂಭವಿಸಿದೆಯೆಂದು ಅಭಿಪ್ರಾಯಪಟ್ಟಿರುವುದು ಸಮರ್ಥನೀಯವಾಗಿದೆ. ಆದರೆ, ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ ಅಧಿವಿಚಾರಣಾ ನ್ಯಾಯಾಲಯವು, ಘಟನೆಯು ಕೋಪ ಮತ್ತು ತಕ್ಷಣದ ಉದ್ರೇಕದಿಂದ ಘಟಿಸಿದೆಯೆಂದು

ಭಾವಿಸಿದರೂ ಕೂಡ, 1ನೇ ಆರೋಪಿಯನ್ನು ಐ.ಪಿ.ಸಿ. ಸೆಕ್ಷನ್ 304–IIರ ಅಡಿಯಲ್ಲಿನ ಅಪರಾಧಕ್ಕಾಗಿ ಅಪರಾಧ ನಿರ್ಣೀತನನ್ನಾಗಿಸಬೇಕಾಗಿರಲಿಲ್ಲ. ಪ್ರಶ್ನಿತ ಘಟನೆಯು ನೇರವಾಗಿ ಐ.ಪಿ.ಸಿ. ಸೆಕ್ಷನ್ 304–Iರ ವ್ಯಾಪ್ತಿಗೆ ಬರುತ್ತದೆ.

17. ಪೂರ್ವಾಲೋಚನೆ ಇಲ್ಲದೆ ಘಟನೆ ನಡೆದಿದೆ. ಅಪರಾಧಿಯು ಅನುಚಿತ ಪ್ರಯೋಜನವನ್ನು ಪಡೆದುಕೊಳ್ಳಬಾರದು ಅಥವಾ ಕ್ರೂರವಾಗಿ ನಡೆದುಕೊಳ್ಳಬಾರದು ಅಥವಾ ಐ.ಪಿ.ಸಿ. ಸೆಕ್ಷನ್ 300ರ 4ನೇ ಅಪವಾದದ ಲಾಭವನ್ನು ಕ್ಲೇಮು ಮಾಡಲು ಸಾಧ್ಯವಾಗುವಂಥ ಅಸಾಮಾನ್ಯ ರೀತಿಯಲ್ಲಿ ವರ್ತಿಸಬಾರದು ಎಂಬುದನ್ನು ಕಾನೂನು ಅಗತ್ಯಪಡಿಸುತ್ತದೆ.

ನಾವು, (ಎ) ಪೂರ್ವಾಲೋಚನೆಯಿಲ್ಲದೆ; (ಬಿ) ತಕ್ಷಣದ ಕಾಳಗದಿಂದ; (ಸಿ) ಅನುಚಿತ ಪ್ರಯೋಜನವನ್ನು ಪಡೆದುಕೊಳ್ಳದೆ ಅಥವಾ ಕ್ರೂರವಾಗಿ ನಡೆದುಕೊಳ್ಳದೆ ಅಥವಾ ಅಸಾಮಾನ್ಯವಾದ ರೀತಿಯಲ್ಲಿ ವರ್ತಿಸದೆ; ಮತ್ತು (ಡಿ) ವ್ಯಕ್ತಿಯೊಂದಿಗೆ ನಡೆಸಿದ ಕಾಳಗವು ಆತನನ್ನು ಕೊಲ್ಲಲೇಬೇಕಾಗಿದ್ದ ಅನಿವಾರ್ಯತೆಯಲ್ಲಿ ಸಂಭವಿಸಿದ್ದರೆ, ಐ.ಪಿ.ಸಿ. ಸೆಕ್ಷನ್ 300ರ 4ನೇ ಪ್ರಕರಣದ ಅಪವಾದದ ನೆರವನ್ನು ಬಳಸಿಕೊಳ್ಳಬಹುದಾಗಿರುತ್ತದೆ. ಭಾವೋದ್ರೇಕದ ಕಾವು ಭಾವೋದ್ರೇಕಗಳು ಯಾವಾಗ ತಣ್ಣಗಾಗಬೇಕೆಂಬುದರ ಕಾಲಾವಕಾಶವನ್ನು ಅಗತ್ಯಪಡಿಸುವುದಿಲ್ಲ. ಯಾವುದನ್ನು ತಕ್ಷಣದ ಜಗಳವೆಂದು ಭಾವಿಸಬೇಕು ಎಂಬ ಬಗ್ಗೆ ಯಾವುದೇ ಸಾಮಾನ್ಯ ನಿಯಮವನ್ನು ಪ್ರತಿಪಾದಿಸಲು ಸಾಧ್ಯವಿಲ್ಲ. ಇದೊಂದು ಪ್ರಶ್ನಿತ ಸಂಗತಿಯಾಗಿದೆ ಮತ್ತು ಜಗಳ ಇದ್ದಕ್ಕಿದ್ದಂತೆ ಆದದ್ದೋ ಅಥವಾ ಅಲ್ಲವೋ ಎಂಬುದು ಅತ್ಯಗತ್ಯವಾಗಿ ಪ್ರತಿಯೊಂದು ಮೊಕದ್ದಮೆಯ ರುಜುವಾತಾದ ಸಂಗತಿಗಳ ಮೇಲೆ ಆಧರಿಸಿರಬೇಕು. 4ನೇ ಅಪವಾದದ ಅನ್ವಯಕ್ಕಾಗಿ, ಇದ್ದಕ್ಕಿದ್ದಂತೆ ಜಗಳವಾಯಿತು ಮತ್ತು ಪೂರ್ವಾಲೋಚನೆ ಇರಲಿಲ್ಲ ಎಂಬುದನ್ನು ತೋರಿಸುವುದಷ್ಟೇ ಸಾಕಾಗುವುದಿಲ್ಲ. ಅಲ್ಲದೆ ಅಪರಾಧಿಯು ಅನುಚಿತ ಪ್ರಯೋಜನವನ್ನು ಪಡೆದಿಲ್ಲ ಅಥವಾ ಕ್ರೂರವಾಗಿ ಅಥವಾ ಅಸಾಮಾನ್ಯವಾದ ರೀತಿಯಲ್ಲಿ ವರ್ತಿಸಿಲ್ಲ ಎಂಬುದನ್ನೂ ತೋರಿಸಬೇಕು. 'ಅನುಚಿತ ಪ್ರಯೋಜನ' ಎಂಬ ಪದವನ್ನು ಉಪಬಂಧದಲ್ಲಿ 'ನ್ಯಾಯೋಚಿತವಲ್ಲದ ಪ್ರಯೋಜನ' ಎಂಬ ಅರ್ಥದಲ್ಲಿ ಬಳಸಲಾಗಿದೆ.

ತೀವ್ರತರವಾದ ಮತ್ತು ದಿಢೀರ್ ಭಾವೋದ್ರೇಕದಲ್ಲಿ ಅಪರಾಧಿಯು ಸ್ವಯಂನಿಯಂತ್ರಣ ಶಕ್ತಿಯನ್ನು ಕಳೆದುಕೊಂಡು ಉದ್ರೇಕಗೊಳಿಸಿದ ವ್ಯಕ್ತಿಯ ಸಾವಿಗೆ ಕಾರಣವಾದಾಗ ಅಥವಾ ಕಣ್ತಪ್ಪಿನಿಂದ ಅಥವಾ ಆಕಸ್ಮಿಕವಾಗಿ ಯಾರೇ ಇತರ ವ್ಯಕ್ತಿಯ ಸಾವಿಗೆ ಕಾರಣನಾದಾಗ, ಆ ಅಪರಾಧ ಘಟಿಸಿರುವುದಕ್ಕೆ ಐ.ಪಿ.ಸಿ. ಸೆಕ್ಷನ್ 300ರ Iನೇ ಅಪವಾದದ ಪ್ರಯೋಜನವನ್ನು ಪಡೆದುಕೊಳ್ಳಬಹುದು.

ಪ್ರಸ್ತುತ ಮೊಕದ್ದಮೆಯಲ್ಲಿ, 1ನೇ ಆರೋಪಿಯು ತೀವ್ರತರವಾದ ಮತ್ತು ದಿಢೀರ್ ಭಾವೋದ್ರೇಕದ ಕಾರಣದಿಂದ ಸ್ವಯಂ ನಿಯಂತ್ರಣ ಶಕ್ತಿಯನ್ನು ಕಳೆದುಕೊಂಡು ಉದ್ರೇಕಗೊಳಿಸಿದ ವ್ಯಕ್ತಿಯ ಸಾವು ಘಟಿಸುವಂತೆ ಮಾಡಿದ್ದಾನೆ; ಅಂತೆಯೇ ಆ ಸಾವನ್ನು ಆರೋಪಿಯು ದಿಢೀರ್ ಹೋರಾಟದಲ್ಲಿ, ಪೂರ್ವಾಲೋಚನೆಯಿಲ್ಲದೆ ಮಾಡಿದ್ದಾನೆ; ಅಪರಾಧಿಯು ಅನುಚಿತ ಪ್ರಯೋಜನವನ್ನು ತೆಗೆದುಕೊಳ್ಳದೆ ಅಥವಾ ಕ್ರೂರವಾಗಿ ಅಥವಾ ಅಸಾಮಾನ್ಯವಾದ ರೀತಿಯಲ್ಲಿ ವರ್ತಿಸದೆ ಕೊಲೆಯಾದ ವ್ಯಕ್ತಿಯೊಂದಿಗೆ ಹೋರಾಡಿದ್ದಾನೆ ಎಂಬಷ್ಟು ಮಟ್ಟಿಗೆ 1ನೇ ಅಪವಾದ ಹಾಗೆಯೇ 4ನೇ ಅಪವಾದ ಅನ್ವಯವಾಗುವಂತಹದ್ದಾಗಿವೆ. ***ಸುಖಬೀರ್ ಸಿಂಗ್–ವಿರುದ್ಧ–ಹರಿಯಾಣ ರಾಜ್ಯ ಸರ್ಕಾರ*** ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು, ಸಾವಿಗೆ ಕಾರಣವಾದ ಮಾರಣಾಂತಿಕ ಗಾಯಗಳು ಐ.ಪಿ.ಸಿ. ಸೆಕ್ಷನ್ 300ರ 4ನೇ ಅಪವಾದದ ಉದ್ದೇಶಗಳಿಗಾಗಿ ಕ್ರೂರ ಅಥವಾ ಅಸಾಮಾನ್ಯವೆಂದು ಅರ್ಥೈಸುವಂತಿಲ್ಲವೆಂದು ನಿರ್ಣಯಿಸಿದೆ. ವಿಷಯವನ್ನು ಮೊಕದ್ದಮೆಯ ನಿರ್ದಿಷ್ಟ ಹಾಗೂ ವಿಶಿಷ್ಟ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಆಧಾರವಾಗಿಟ್ಟುಕೊಂಡು ತೀರ್ಮಾನಿಸಬೇಕಾಗಿರುತ್ತದೆ. ಮೇಲೆ ತಿಳಿಸಲಾದಂತೆ, ಮೃತರು 1ನೇ ಆರೋಪಿಯು ಮದುವೆಯಾಗಬೇಕಾಗಿದ್ದ ಹುಡುಗಿಯ ಬಗ್ಗೆ ಹೊಲಸು ಮಾತುಗಳನ್ನಾಡುವ ಮೂಲಕ 1ನೇ ಆರೋಪಿಯನ್ನು ಚುಡಾಯಿಸಿದ್ದಾನೆ; ಈಗಾಗಲೇ ನಿಶ್ಚಿತಾರ್ಥವಾಗಿದ್ದ ಮತ್ತು ಘಟನೆ ನಡೆದ ದಿನಾಂಕದಿಂದ ಇನ್ನು ಎಂಟು ದಿನಗಳಲ್ಲಿ ಮದುವೆ ಸಮಾರಂಭ ನಡೆಯಬೇಕಾಗಿದ್ದ 1ನೇ ಆರೋಪಿಗೆ ಮೃತರು ಬಳಸಿದ ಈ ಅಸಹ್ಯದ ಮಾತುಗಳನ್ನು ತಡೆದುಕೊಳ್ಳಲಾಗಲಿಲ್ಲ. ದಿಢೀರನೆ ಭಾವೋದ್ರೇಕದ ಕಾವಿನಲ್ಲಿ ಪೂರ್ವಾಲೋಚನೆಯಿಲ್ಲದೆ ಸ್ವಯಂಸ್ಥಿಮಿತವನ್ನು

ಕಳೆದುಕೊಂಡು ಮೃತರ ಮೇಲೆ ಹಲ್ಲೆ ಮಾಡಿದ್ದಾನೆ. ಹಾಗಾಗಿ, ಮೊಕದ್ದಮೆಯ ಒಟ್ಟಾರೆ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಅವಲೋಕಿಸಿದಾಗ ಅಪರಾಧವು, ನೇರವಾಗಿ, ಕೊಲೆಯೆನಿಸಿದ ಅಪರಾಧಿಕ ನರಹತ್ಯೆಯ ಅರ್ಥವ್ಯಾಪ್ತಿಗೆ ಒಳಪಡುತ್ತದೆಯೇ ಹೊರತು ಕೊಲೆಯ ವ್ಯಾಪ್ತಿಗಲ್ಲ.

ಮೃತರ ಮೇಲೆ ಆಗಿರುವ ಹಲವಾರು ಸಂಖ್ಯೆಯ ಗಾಯಗಳನ್ನು ಗಮನದಲ್ಲಿಟ್ಟುಕೊಂಡಾಗ 1ನೇ ಆರೋಪಿಯು ಮೃತರ ಜೀವ ತೆಗೆಯುವ ಉದ್ದೇಶವನ್ನು ಹೊಂದಿದ್ದ ಎಂಬುದು ಸ್ಪಷ್ಟವಾಗುತ್ತದೆ. ಅಥವಾ, ಕನಿಷ್ಟಪಕ್ಷ ಸಾವು ಘಟಿಸುವ ಸಂಭವವಿರುವಂಥ ದೈಹಿಕ ಗಾಯವನ್ನು ಮಾಡುವ ಉದ್ದೇಶವನ್ನಾದರೂ ಹೊಂದಿದ್ದಾನೆ. ತನ್ನ ಕೃತ್ಯವು ಇಬ್ಬರ ಜೀವಗಳನ್ನು ತೆಗೆಯುತ್ತದೆಂಬುದು ಅವನಿಗೆ ತಿಳಿದಿರುವುದು ಮಾತ್ರವಲ್ಲದೆ, ಅದಕ್ಕಿಂತ ಹೆಚ್ಚಿನದಾಗಿ ಅವನ ಮನಸ್ಸಿನಲ್ಲಿ ಅದನ್ನು ಸಾಧಿಸುವ ಉದ್ದೇಶವಿತ್ತು. ಸಾಯಿಸುವ ಉದ್ದೇಶ ಆತನಿಗೆ ಇಲ್ಲದಿದ್ದರೆ, ಆತನು ಮೃತರಿಗೆ ಏಟುಹೊಡೆದು ಕೆಲವು ಗಾಯಗಳನ್ನು ಮಾಡಿ ಘಟನಾ ಸ್ಥಳದಿಂದ ಓಡಿಹೋಗಬಹುದಿತ್ತು. ಆತನು ಮೃತರ ಜೀವವನ್ನು ತೆಗೆಯದೆ ಆತನು ಘಟನಾ ಸ್ಥಳದಿಂದ ಕದಲಲಿಲ್ಲ ಎಂಬ ಸಂಗತಿಯೇ ಅವನು ಮೃತರ ಜೀವವನ್ನು ತೆಗೆಯುವ ಉದ್ದೇಶವನ್ನು ಹೊಂದಿದ್ದನೆಂಬುದನ್ನು ಅಥವಾ ಸಾಯುವ ಸಂಭವವಿರುವಂಥ ದೈಹಿಕ ಗಾಯವನ್ನಾದರೂ ಮಾಡುವ ಉದ್ದೇಶವನ್ನು ಹೊಂದಿದ್ದನೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಆದ್ದರಿಂದ, ಆತನು ಮಾಡಿದ ಅಪರಾಧವು ಐ.ಪಿ.ಸಿ. ಸೆಕ್ಷನ್ 304–Iರ ಅಡಿಯಲ್ಲಿ ಬರುತ್ತದೆ.

ಆದರೆ, ಮೇಲೆ ತಿಳಿಸಲಾದಂತೆ, ನಮಗೆ, 2 ಮತ್ತು 3ನೇ ಆರೋಪಿಗಳ ಖುಲಾಸೆಗೆ ಸಂಬಂಧಿಸಿದ ಅಧಿವಿಚಾರಣಾ ನ್ಯಾಯಾಲಯದ ತೀರ್ಪಿನ ಬಗ್ಗೆ ಸಹಮತಿ ಇದೆ. ತದನುಸಾರವಾಗಿ, ಈ ಕೆಳಕಂಡ ಆದೇಶವನ್ನು ಮಾಡಲಾಗಿದೆ.

ಸೆಷನ್ಸ್ ಮೊಕದ್ದಮೆ ಸಂ. 255/2004ರಲ್ಲಿ ಅಧಿವಿಚಾರಣಾ ನ್ಯಾಯಾಲಯವು 2 ಮತ್ತು 3ನೇ ಆರೋಪಿಗಳ ಪರವಾಗಿ ಹೊರಡಿಸಿದ ಖುಲಾಸೆ ತೀರ್ಪು ಮತ್ತು

ಆದೇಶವನ್ನು ಎತ್ತಿಹಿಡಿಯಲಾಗಿದೆ. ಈ ಸಂಬಂಧ ಸರ್ಕಾರವು ಹೂಡಿದ ಮೇಲ್ಮನವಿಯನ್ನು ತಳ್ಳಿಹಾಕಲಾಗಿದೆ.

1ನೇ ಆರೋಪಿ, ಎಂದರೆ ಆರ್.ಹೆಚ್.ಕೇಶವನನ್ನು ಅಪರಾಧ ನಿರ್ಣೀತನನ್ನಾಗಿಸುವ ತೀರ್ಪು ಮತ್ತು ಆದೇಶವನ್ನು ಮಾರ್ಪಾಟುಗೊಳಿಸಿ, ಐ.ಪಿ.ಸಿ.ಸೆಕ್ಷನ್ 304–Iರ ಅಡಿಯಲ್ಲಿನ ಅಪರಾಧಕ್ಕಾಗಿ ಅಪರಾಧ ನಿರ್ಣೀತನನ್ನಾಗಿಸಿದೆ.

ಐ.ಪಿ.ಸಿ. ಸೆಕ್ಷನ್ 302ರ ಅಡಿಯಲ್ಲಿನ ಅಪರಾಧಕ್ಕಾಗಿ 1ನೇ ಆರೋಪಿಯನ್ನು ಖುಲಾಸೆಗೊಳಿಸುವ ತೀರ್ಪು ಮತ್ತು ಆದೇಶವನ್ನು ಎತ್ತಿಹಿಡಿಯಲಾಗುತ್ತದೆಂದು ಸ್ಪಷ್ಟಪಡಿಸಲಾಗಿದೆ.

ಮಾನ್ಯ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ (ಎಸ್.ಪಿ.ಪಿ.) ಬಿ.ಟಿ.ವೆಂಕಟೇಶ್ ಮತ್ತು ಮಾನ್ಯ ನ್ಯಾಯವಾದಿ ಶ್ರೀ ಎಸ್.ಕೆ.ವೆಂಕಟರೆಡ್ಡಿಯವರು ಶಿಕ್ಷೆಯ ಬಗ್ಗೆ ಅಹವಾಲನ್ನು ಸಲ್ಲಿಸಿದ್ದಾರೆ. 1ನೇ ಆರೋಪಿಯ ಪರ ಮಾನ್ಯ ನ್ಯಾಯವಾದಿ ಶ್ರೀ ವೆಂಕಟರೆಡ್ಡಿಯವರು, ಮೊದಲನೇ ಆರೋಪಿಯು ಇನ್ನೂ ಯುವಕ ಮತ್ತು ಅವನು ಈಗಾಗಲೇ ಐದು ವರ್ಷಗಳ ಶಿಕ್ಷೆಯನ್ನು ಅನುಭವಿಸಿದ್ದಾನೆ ಮತ್ತು 2,00,000/– ರೂ.ಗಳ ದಂಡವನ್ನು ಸಂದಾಯ ಮಾಡಿದ್ದಾನೆ, ಅವನು ಈಗಾಗಲೇ ಮದುವೆಯಾಗಿದ್ದು, ಜೀವನದಲ್ಲಿ ನೆಲೆ ಕಂಡುಕೊಳ್ಳುತ್ತಿದ್ದಾನೆ. ಆದ್ದರಿಂದ ಜುಲ್ಮಾನೆಯನ್ನು ಹೆಚ್ಚಿಸಿ, ಸೆರೆವಾಸವನ್ನು ಐದು ವರ್ಷಗಳಿಗೆ ಮಾತ್ರವೇ ಸೀಮಿತಗೊಳಿಸಿ ಅವನ ಮೇಲೆ ದಯೆ ತೋರಿಸಬಹುದೆಂದು ವಾದಿಸಿದ್ದಾರೆ. ಒಂದು ವೇಳೆ 1ನೇ ಆರೋಪಿಯನ್ನು ಮತ್ತೆ ಸೆರೆಮನೆಗೆ ಕಳುಹಿಸಿದರೆ ಆತನ ಮಹತ್ವದ ಯುವ ಜೀವನವು ಸೆರೆಮನೆಯಲ್ಲಿ ಕಳೆದುಹೋಗಬಹುದೆಂದು ಅವರು ವಾದಿಸಿದ್ದಾರೆ.

ತದ್ವಿರುದ್ಧವಾಗಿ ಮಾನ್ಯ ಎಸ್.ಪಿ.ಪಿ.ಯವರು ವೆಂಕಟರೆಡ್ಡಿಯವರ ಮೇಲ್ಕಂಡ ವಾದವನ್ನು ವಿರೋಧಿಸಿ 1ನೇ ಆರೋಪಿಗೆ ಯಾವುದೇ ದಯೆ ತೋರಿಸಬಾರದೆಂದು ವಾದಿಸಿದ್ದಾರೆ.

ಒಂದನೇ ಆರೋಪಿಯು ಎರಡು ವ್ಯಕ್ತಿಗಳ ಜೀವವನ್ನು ತೆಗೆದಿದ್ದಾನೆ; ಅವನಿಗೆ ದಯೆ ತೋರಿಸಿದರೆ, ನ್ಯಾಯಕ್ಕೆ ಧಕ್ಕೆಯಾಗುತ್ತದೆ ಮತ್ತು ಸಮಾಜಕ್ಕೆ ತಪ್ಪು ಸಂದೇಶ ರವಾನೆಯಾಗುತ್ತದೆ. ಮೇಲೆ ಹೇಳಲಾದ ವಾದಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಸಮಗ್ರ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಅವಲೋಕಿಸಿ, ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ, 1ನೇ ಆರೋಪಿಗೆ ಎಂಟು ವರ್ಷಗಳ ಅವಧಿಯ ಜೈಲುಶಿಕ್ಷೆ ಮತ್ತು 6,00,000/– (ಆರು ಲಕ್ಷ ರೂ.ಗಳು ಮಾತ್ರ) ದಂಡವನ್ನು ವಿಧಿಸಿದರೆ ನ್ಯಾಯೋದ್ದೇಶವು ಈಡೇರಿದಂತಾಗುತ್ತದೆ. ತದನುಸಾರವಾಗಿ ಈ ಮುಂದಿನ ಆಜ್ಞೆಯನ್ನು ಹೊರಡಿಸಲಾಗಿದೆ:

## ಆಜ್ಞೆ

1ನೇ ಆರೋಪಿಗೆ ಎಂದರೆ, ಆರ್.ಹೆಚ್.ಕೇಶವನಿಗೆ ಐ.ಪಿ.ಸಿ.ಸೆಕ್ಷನ್ 304 ಭಾಗ–Iರ ಅಡಿಯಲ್ಲಿನ ಅಪರಾಧಕ್ಕಾಗಿ ಎಂಟು ವರ್ಷಗಳ ಜೈಲುಶಿಕ್ಷೆ ಮತ್ತು 6,00,000/–ರೂ.ಗಳ ದಂಡವನ್ನು ವಿಧಿಸಲಾಗಿದೆ. ದಂಡವನ್ನು ಸಂದಾಯ ಮಾಡಲು ತಪ್ಪಿದಲ್ಲಿ, 1ನೇ ಆರೋಪಿ ಇದರಲ್ಲಿನ ಎದುರುದಾರ ಸಂ.1, $2^1/_2$ ವರ್ಷಗಳ ಹೆಚ್ಚಿನ ಜೈಲು ಶಿಕ್ಷೆಯನ್ನು ಅನುಭವಿಸತಕ್ಕದ್ದು. ದಂಡವನ್ನು ವಸೂಲು ಮಾಡಿದ ಸಂದರ್ಭದಲ್ಲಿ, ಸಂಪೂರ್ಣ ದಂಡದ ಮೊತ್ತವನ್ನು ಪರಿಹಾರವಾಗಿ ಇಬ್ಬರೂ ಮೃತರ ಪತ್ನಿಯರಿಗೆ ಸಮಪ್ರಮಾಣದಲ್ಲಿ ಸಂದಾಯ ಮಾಡತಕ್ಕದ್ದು.

ತದನುಸಾರವಾಗಿ ಮೇಲ್ಮನವಿಯನ್ನು **ಭಾಗಶಃ ಪುರಸ್ಕರಿಸಲಾಗಿದೆ**.

ಈಗಾಗಲೇ ಅನುಭವಿಸಿರುವ ಜೈಲುಶಿಕ್ಷೆಯನ್ನು ಹಾಗೂ ಈಗಾಗಲೇ ಸಂದಾಯ ಮಾಡಿರುವ ಮೊತ್ತವನ್ನು ಇದಕ್ಕೆ ವಜಾ ಹಾಕಿಕೊಳ್ಳತಕ್ಕದ್ದು.